# ಭಾಗ 1

## ಸಾಮಾಜಿಕ ಅಧ್ಯಯನಗಳ ತಾತ್ವಿಕತೆ ಮತ್ತು ಚರಿತ್ರೆ:

## ಸಾಮಾಜಿಕ ಅಧ್ಯಯನ(ಗಳು) ಎಂದರೇನು?

## ಅಧ್ಯಾಯ 1

## ಸಾಮಾಜಿಕ ಅಧ್ಯಯನಗಳು: ವ್ಯಾಖ್ಯಾನ, ಸಂಘಟನೆ, ಮತ್ತು ತಾತ್ವಿಕತೆ

ಬೋಧನೆಯನ್ನು ಯಶಸ್ವಿಗೊಳಿಸುವ ಮತ್ತು ಅದು ಪರಿಣಾಮಕಾರಿಯಾಗದಿರಲು ಇರುವ ಕಾರಣಗಳಾವುವು ಎನ್ನುವುದು ಒಬ್ಬ ಉತ್ತಮ ಮನುಷ್ಯನಿಗೆ ತಿಳಿದಿದ್ದರೆ ಅವನು ಇತರರಿಗೆ ಒಬ್ಬ ಬೋಧಕನಾಗುತ್ತಾನೆ. ಹಾಗಾಗಿ ತನ್ನ ಬೋಧನೆಯಲ್ಲಿ ಅವನು ಮುನ್ನಡೆಸುತ್ತಾನೆ, ಎಳೆದೊಯ್ಯುವುದಿಲ್ಲ; ಬಲಿಷ್ಠಗೊಳಿಸುತ್ತಾನೆ, ನಿರುತ್ಸಾಹಗೊಳಿಸುವುದಿಲ್ಲ; ಅವನು ಹಾದಿಯನ್ನು ತೆರೆಯುತ್ತಾನೆ ಆದರೆ ಕಲಿಯುವವನ ಸ್ವಪ್ರಯತ್ನವಿಲ್ಲದೆ ಗುರಿಯನ್ನು ನಿರ್ವಹಿಸುವುದಿಲ್ಲ. ಎಳೆದೊಯ್ಯದೆ ಮುನ್ನಡೆಸುವುದು ಸಾಮರಸ್ಯವನ್ನು ಸೃಷ್ಟಿಸುತ್ತದೆ. ಬಲಿಷ್ಠಗೊಳಿಸುವುದು ಮತ್ತು ನಿರುತ್ಸಾಹಗೊಳಿಸದಿರುವುದು ಸಾಧನೆಯನ್ನು ಸುಲಭಗೊಳಿಸುತ್ತದೆ. ಹಾದಿಯನ್ನು ತೆರೆಯುವುದು ಮತ್ತು ಗುರಿಯನ್ನು ನಿರ್ವಹಿಸದೆ ಇರುವುದು ಕಲಿಯವವನನ್ನು ಅಲೋಚನೆಗೆ ಹಚ್ಚುತ್ತದೆ. ಅಂತಹ ಸಾಮರಸ್ಯವನ್ನು, ಸುಲಭವಾಗಿ ಸಾಧಿಸುವುದನ್ನು, ಮತ್ತು ಅಲೋಚನೆಗೆ ಹಚ್ಚುವುದನ್ನು ಸಾಧ್ಯವಾಗಿಸುವವನನ್ನು ಕುಶಲ ಬೋಧಕನೆಂದು ಕರೆಯಬಹುದು.

__ ಕನ್‌ಫ್ಯೂಸಿಯಸ್, ದಿ ಅನಲೆಕ್ಟ್ಸ್

## ಮೇಲ್ನೋಟ

ಸಾಮಾಜಿಕ ಅಧ್ಯಯನ(ಗಳು) ಎಂದರೇನು? ಶಿಕ್ಷಣ ವಿಷಯವೊಂದರ ವ್ಯಾಖ್ಯಾನ.

- ಸಂಘಟನಾ ತತ್ವಗಳು
- ಸಾಮಾಜಿಕ ಅಧ್ಯಯನಗಳ ದೃಷ್ಟಿಕೋನಗಳ ಭಿನ್ನತೆಯ ಮೂಲಗಳು

ಸಿದ್ಧಾಂತ ಮತ್ತು ಆಚರಣೆಯ ನಡುವಿನ ಸೇತುವೆಯಾಗಿ ಗುರಿಗಳು

- ಸಿದ್ಧಾಂತ
- ಆಚರಣೆ

ಸಾರಾಂಶ

ಸಾಮಾಜಿಕ ಅಧ್ಯಯನಗಳ ಒಂದು ಸರ್ವೇಸಾಮಾನ್ಯ ವ್ಯಾಖ್ಯಾನದ ಕುರಿತು ಶಿಕ್ಷಣತಜ್ಞರಲ್ಲಿ ಎಂದಿಗೂ ಸಹಮತವಿಲ್ಲ. ವಿಷಯವು ಏಕವಚನವೊ ಅಥವಾ ಬಹುವಚನವೊ ಸಮಗ್ರವೊ ಅಥವಾ ಒಂದು ಸಂಗ್ರಹವೊ ಎನ್ನುವುದರ ಬಗ್ಗೆ ನಾವಿನ್ನೂ ನಿರ್ಧರಿಸಿಲ್ಲ. ಗುರಿಗಳ ಬಗ್ಗೆ ಗಣನೀಯವಾದ ಭಿನ್ನಾಭಿಪ್ರಾಯವಿರುವುದು ನಮ್ಮ ಅನುಭವಕ್ಕೆ ಬಂದಿದೆ. ಇದರ ಪರಿಣಾಮವಾಗಿ ಎಲ್ಲ ಸಾಮಾಜಿಕ ಅಧ್ಯಯನಗಳ ಬೋಧಕರುಗಳು ಪ್ರಾರಂಭದಲ್ಲೆ ಕೆಲವು ಇಕ್ಕಟ್ಟುಗಳಿಗೆ ಒಳಗಾಗುತ್ತಾರೆ: ಏನನ್ನು ಕಲಿಸಬೇಕು, ಹೇಗೆ ಕಲಿಸಬೇಕು, ಮತ್ತು ಏಕೆ ಇದನ್ನು ಕಲಿಸಬೇಕು. ಸ್ವಲ್ಪ ಮಟ್ಟಿಗೆ ಸಾಮಾಜಿಕ ಅಧ್ಯಯನಗಳ ರಾಷ್ಟ್ರೀಯ ಸಮಿತಿ, ಮತ್ತು/ಅಥವಾ ನಿಮ್ಮ ರಾಜ್ಯದ, ಜಿಲ್ಲೆಯ, ಅಥವಾ ಶಾಲೆಯ ಪಠ್ಯಕ್ರಮವು ನಿರ್ಧರಿಸಿದ ಮಾನದಂಡಗಳು ಈ ಪ್ರಶ್ನಗಳಿಗೆ ಉತ್ತರ ನೀಡುತ್ತವೆ. ಸಾಮಾನ್ಯವಾಗಿ ಇಂತಹ

ಮಾರ್ಗಸೂಚಿಗಳು ಏನನ್ನು ಕಲಿಸಬೆಕು ಎನ್ನುವುದರ ಸೂಚನೆಯನ್ನು ನೀಡುತ್ತವೆ, ಆದರೆ ಇತರ ಎರಡು ಆಯಾಮಗಳ ಬಗ್ಗೆ ಅಷ್ಟಾಗಿ ಹೇಳುವುದಿಲ್ಲ. ಒಂದು ಉದಾಹರಣೆಯಾಗಿ, ಸಾಮಾಜಿಕ ಅಧ್ಯಯನಗಳ ರಾಷ್ಟ್ರೀಯ ಸಮಿತಿಯ ಮಾನದಂಡವು ಇತಿಹಾಸ ಮತ್ತು ಸಾಮಾಜಿಕ ವಿಜ್ಞಾನಗಳು ಸೇರಿದಂತೆ ಹತ್ತು ವಿಷಯಗಳನ್ನು ಒಳಗೊಂಡಿದೆ, ಆದರೆ ಅಧ್ಯಯನ ವಿಧಾನದ ಕುರಿತು ಯಾವುದೇ ಮಾರ್ಗಸೂಚಿಯನ್ನು ನೀಡುವುದಿಲ್ಲ. ಹಾಗಾಗಿ ಕೆಲವು ಸೂಚನೆಗಳು ಲಭ್ಯವಿದ್ದರೂ ಕೂಡ, ಕೆಲವು ನಿರ್ದಿಷ್ಟ ನಿರ್ಧಾರಗಳನ್ನು ನೀವೇ ತೆಗೆದುಕೊಳ್ಳಬೇಕಾಗುತ್ತದೆ.

ಗತದ ಬಗೆಗಿನ ಜ್ಞಾನವನ್ನು ಪ್ರಸರಿಸುವುದು ಸಾಮಾಜಿಕ ಅಧ್ಯಯನಗಳ ಗುರಿ ಎಂದು ಬಹಳ ಮಂದಿ ವಾದಿಸುತ್ತಾರೆ. ಇದನ್ನು ನಾವು ನೀತಿಬೋಧಕ ಗುರಿ (ಹೇಳುವುದಕ್ಕೆ ಒತ್ತು ನೀಡುವ) ಎಂದು ಕರೆಯುತ್ತೇವೆ. ಇದಕ್ಕೆ ಉಳಿದವರು ತಮ್ಮಷ್ಟಕ್ಕೆ ತಾವೆ ಒಂದು ಗುರಿಯಾಗಲು ಮಾಹಿತಿ, ದತ್ತಾಂಶಗಳು ಪರ್ಯಾಪ್ತವಲ್ಲ ಎಂದು ದೃಢವಾಗಿ ಪ್ರತಿಭಟಿಸುತ್ತಾರೆ. ಹೀಗೆ ಟೀಕಿಸುವವರು ಮಾಹಿತಿಯು ಉಪಯುಕ್ತವಾಗಬೇಕಾದರೆ ಅದನ್ನು ಅರಗಿಸಿಕೊಳ್ಳಬೇಕಾಗುತ್ತದೆ, ವಿಶ್ಲೇಷಿಸಬೇಕಾಗುತ್ತದೆ, ಮತ್ತು ಅನ್ವಯಿಸಬೇಕಾಗುತ್ತದೆ ಎನ್ನುವುದರತ್ತ ಗಮನ ಸೆಳೆಯುತ್ತಾರೆ. ಈ ಅಭಿಪ್ರಾಯವನ್ನು ಚಿಂತನಶೀಲ ಗುರಿ ಎಂದು ಕರೆಯಲಾಗುತ್ತದೆ. ಸಾಮಾಜಿಕ ಅಧ್ಯಯನಗಳು ಸಾಮಾಜಿಕ ಬದಲಾವಣೆ ಮತ್ತು ಪ್ರಜಾಶಿಕ್ಷಣದ ಕರ್ತೃವಾಗಿ ಸೇವೆ ಸಲ್ಲಿಸಬೇಕು ಎನ್ನುವ ಒಂದು ಬಲವಾದ ಲಾಬಿಯೂ ಇದೆ. ಈ ಗುಂಪಿನ ಪ್ರತಿಪಾದಕರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನೈತಿಕ ಜೀವನ ಶೈಲಿಯನ್ನು ಅನುಸರಿಸುವ ಕಾರ್ಯಕರ್ತರ ಮತ್ತು ಭಾಗವಹಿಸುವವರ ಅಗತ್ಯದ ಬಗ್ಗೆ ಚಿಂತಿತರಾಗಿದ್ದಾರೆ. ನೈತಿಕ ಪ್ರಶ್ನೆಗಳು, ಅನಿಸಿಕೆಗಳು, ಭಾವನೆಗಳು,ಮತ್ತು ಮೌಲ್ಯಗಳನ್ನು ಒಳಗೊಳ್ಳುವುದರಿಂದ ಇದನ್ನು ನಾವು ಭಾವುಕ ಗುರಿ ಎಂದು ವಿವರಿಸುತ್ತೇವೆ. ಸಾಮಾಜಿಕ ಅಧ್ಯಯನಗಳ ಬೋಧನೆಯ ಈ ನೀತಿಬೋಧಕ, ಚಿಂತನಶೀಲ, ಮತ್ತು ಭಾವಾತ್ಮಕ ಆಯಾಮಗಳು ಶಾಲೆಯ ಪ್ರತಿನಿತ್ಯದ ಚಟುವಟಿಕೆಗಳು ಮತ್ತು ಶಿಕ್ಷಣ, ಸಿದ್ಧಾಂತ, ಮತ್ತು ತತ್ವಶಾಸ್ತ್ರಗಳ ಕುರಿತಾದ ವಿವಾದಗಳು- ಇವೆರಡರಿಂದಲೂ ಹುಟ್ಟಿಕೊಳ್ಳುತ್ತವೆ.

ಗುರಿಗಳನ್ನು ಕುರಿತು ಚರ್ಚಿಸುವುದರೊಂದಿಗೆ ಕೆಲವು ಶಿಕ್ಷಣ ತಜ್ಞರು ಸಾಮಾಜಿಕ ಅಧ್ಯಯನಗಳನ್ನು ವಿಶಾಲವಾದ ಅರ್ಥದಲ್ಲಿ ಇತಿಹಾಸವೆಂದು ವ್ಯಾಖ್ಯಾನಿಸುತ್ತಾರೆ; ಇತರರು ಇದನ್ನು ಮುಖ್ಯವಾಗಿ ಸಾಮಾಜಿಕ ವಿಜ್ಞಾನಗಳ - ಮಾನವಶಾಸ್ತ್ರ, ಅರ್ಥಶಾಸ್ತ್ರ, ರಾಜಕೀಯ ವಿಜ್ಞಾನ, ಮನಃಶಾಸ್ತ್ರ, ಮತ್ತು ಸಮಾಜಶಾಸ್ತ್ರದ ಅಧ್ಯಯನವೆಂಬಂತೆ ನೋಡುತ್ತಾರೆ. ಮತ್ತೂ ಕೆಲವರು ಸಮಾಜದ ವ್ಯಾಖ್ಯಾನವನ್ನು ನೀಡುವ ಸಾಮಾಜಿಕ ಅಧ್ಯಯನಗಳು ತಮ್ಮಷ್ಟಕ್ಕೆ ತಾವೇ ಒಂದು ಕ್ಷೇತ್ರವೆನಿಸಿದೆಯೆಂದು ಸೂಚಿಸುತ್ತಾರೆ, ಕೆಲವೇ ಕೆಲವರ ಪ್ರಕಾರ ಇದು ಪ್ರಮುಖವಾಗಿ ವಿದ್ಯಾರ್ಥಿಗಳ ಆತ್ಮಸ್ಥೈರ್ಯವನ್ನು ಮೂಡಿಸುತ್ತದೆ. ಮಾಧ್ಯಮಿಕ ಹಂತದ ಶಾಲೆಗಳಲ್ಲಿ ಈ ಕ್ಷೇತ್ರವು ಸಾಮಾನ್ಯವಾಗಿ ಅದರ ಕಡ್ಡಾಯ ಪಾಠ್ಯಕ್ರಮ ವಿಷಯಗಳಿಂದ ವ್ಯಾಖ್ಯಾನಿಸಲ್ಪಡುತ್ತದೆ: ಅಲ್ಪಸ್ವಲ್ಪ ಸಮಾಜ ವಿಜ್ಞಾನ ಮತ್ತು ವಿಶೇಷ ಐಚ್ಛಿಕ (electives)ಗಳೊಂದಿಗಿನ ವಿಶ್ವ ಮತ್ತು ಅಮೇರಿಕಾದ ಇತಿಹಾಸ, ಅರ್ಥಶಾಸ್ತ್ರ, ಪೌರನೀತಿ ಅಥವಾ ಅಮೇರಿಕಾದ ಪ್ರಜಾಪ್ರಭುತ್ವ. ವಿಪರೀತ ಕಾರ್ಯಭಾರ, ಸಾರ್ವಜನಿಕ ಒತ್ತಡ, ಹಣಕಾಸಿನ ವ್ಯವಸ್ಥೆ, ಪ್ರತಿಬಂಧಿತ ಶಾಲಾಕೊಠಡಿಯ ಅವಧಿ, ಅನುಶಾಸನಾತ್ಮಕ ವಿವಾದಾಂಶಗಳು, ಮತ್ತು ಕೆಲವೊಮ್ಮೆ ಬೋಧಕರ ಕೌಶಲ್ಯಗಳು ಅಥವಾ ಜ್ಞಾನದ ಮಿತಿಗಳು ಇವೇ ಮೊದಲಾದ ಶಾಲಾಕೊಠಡಿಯ ವಾಸ್ತವಾಂಶಗಳು ಏನನ್ನು ಹೇಳಿಕೊಡಲಾಗುತ್ತದೊ ಅದರ ಮತ್ತು ಅಧ್ಯಯನ ವಿಷಯವನ್ನು ಹೇಗೆ ಕಲಿಸಲಾಗುತ್ತದೆಯೆಂಬುದರ ವ್ಯಾಪ್ತಿಯನ್ನು ಸಂಕುಚಿತಗೊಳಿಸುತ್ತದೆ. ಇಂತಹ ಪರಿಚಿತ ಒತ್ತಡಗಳಿಗೆ ಮತ್ತಷ್ಟು ಹೊಸ ಸೇರ್ಪಡೆಯಾಗಿ ರಾಷ್ಟ್ರೀಯ

ಮಾನದಂಡಗಳು, ಸಾಮಾನ್ಯ ಪಠ್ಯಕ್ರಮ, ಮತ್ತು ಸಾಮಾಜಿಕ ಅಧ್ಯಯನಗಳಲ್ಲಿ ಸಮಾನ ಪರೀಕ್ಷಣಗಳು ಸೇರಿಕೊಳ್ಳುತ್ತವೆ. ನಿಮ್ಮ ಇ-ಮೇಲ್‌ನೊಂದಿಗೆ ನಿರಂತರ ಸಂಪರ್ಕದಲ್ಲಿರುವುದನ್ನು ಮರೆಯಬೇಡಿ!

ಸೈದ್ಧಾಂತಿಕವಾಗಿ, ಸಾಮಾಜಿಕ ಅಧ್ಯಯನಗಳು ಮಾನವನ ವರ್ತನೆಗೆ ಸಂಬಂಧಪಟ್ಟ - ಭೂತ, ವರ್ತಮಾನ, ಮತ್ತು ಭವಿಷ್ಯದ ಯಾವುದೇ ವಿಷಯ ಅಥವಾ ವಿವಾದಾಂಶಗಳನ್ನು ಒಳಗೊಳ್ಳಬಹುದಾಗಿದೆ. ವಿಷಯವಸ್ತುವನ್ನು ಸಾಮಾನ್ಯವಾಗಿ, ಈಗಾಗಲೇ ಗುರುತಿಸಲ್ಪಟ್ಟ ಮೂರು ಆಯಾಮಗಳಲ್ಲಿ ಯಾವುದಾದರೂ ಒಂದರ ನಿಟ್ಟಿನಲ್ಲಿ ವ್ಯವಸ್ಥಿತಗೊಳಿಸಲಾಗುತ್ತದೆ. ಕೆಲವು ಶಿಕ್ಷಣ ತಜ್ಞರು ಕನಿಷ್ಟ ಪಕ್ಷ ಇತರ ಎರಡು ಆಯೋಜನ ತತ್ವಗಳನ್ನು ಈ ಪಟ್ಟಿಯಲ್ಲಿ ಸೇರಿಸುತ್ತಾರೆ: (ಅ) ಸಾಮಾಜಿಕ ಕ್ರಿಯೆಯ ತತ್ವಚಿಂತನೆ ಮತ್ತು (ಆ) ಆತ್ಮ=ವಿಕಾಸ, ಆತ್ಮಸ್ಥೈರ್ಯ ನಿರ್ಮಾಣ, ಮತ್ತು ವ್ಯಕ್ತಿಗತ ವೃದ್ಧಿಗಳನ್ನು ಪ್ರೋತ್ಸಾಹಿಸುವ ವ್ಯಕ್ತಿ=ಉನ್ಮುಖ ಮನುಷ್ಯತ್ವ. ಈ ಪ್ರತಿಯೊಂದು ಆಯೋಜನ ತತ್ವವು ಕಳೆದ ನೂರು ವರ್ಷಗಳಲ್ಲಿ ಶಿಕ್ಷಕರನ್ನು ಪ್ರಭಾವಿಸಿದ ತತ್ವಶಾಸ್ತ್ರದ ಚಿಂತನಾ ಕ್ರಮಗಳಿಂದ ಬೆಳೆದು ಬಂದಿರುವ ತನ್ನದೇ ಆದ ಗುರಿಗಳನ್ನು, ವಿಧಾನಗಳನ್ನು, ಮತ್ತು ಪಠ್ಯಕ್ರಮದ ಶಿಫಾರಸುಗಳನ್ನು ಹೊಂದಿರುತ್ತದೆ,

ನಿಮಗೇನನಿಸುತ್ತದೆ?

ಸಾಮಾಜಿಕ ಅಧ್ಯಯನಗಳಲ್ಲಿ ಸೇರಿಸಬೇಕಾದ ಯಾವ ವಿಷಯವನ್ನು ನೀವು ಅಧ್ಯಯನ ಮಾಡಿದ್ದೀರಿ... ಯವುದನ್ನು ಹೊರಗಿಡಬೇಕು? ಸಮಾಜಶಾಸ್ತ್ರ? ಚಾಲಕ ತರಬೇತಿ? ವ್ಯಾಪಾರವಹಿವಾಟು? ಮಾಧ್ಯಮ? ಪ್ರಾಚೀನ ಇತಿಹಾಸ? ಚಾರಿತ್ರ್ಯ ಶಿಕ್ಷಣ?

ಈ ಅಧ್ಯಾಯದಲ್ಲಿ ಸಾಮಾಜಿಕ ಅಧ್ಯಯನಗಳ ವಿವಿಧ ವ್ಯಾಖ್ಯಾನಗಳು, ಗುರಿಗಳನ್ನು ವ್ಯವಸ್ಥಿತಗೊಳಿಸುವ ವಿವಿಧ ವಿಧಾನಗಳು, ಮತ್ತು ತತ್ವಶಾಸ್ತ್ರದ ಪ್ರತಿಸ್ಪರ್ಧಿ ಶಾಖೆಗಳು ಈ ಕ್ಷೇತ್ರವನ್ನು ಹೇಗೆ ಪ್ರಭಾವಿಸಿವೆ ಎನ್ನುವುದನ್ನು ಅಧ್ಯಯನ ಮಾಡಲು ನಿಮ್ಮನ್ನು ಆಹ್ವಾನಿಸಲಾಗಿದೆ. ನಿಮ್ಮ ಪ್ರತಿನಿತ್ಯದ ಸಾಮಾಜಿಕ ಅಧ್ಯಯನಗಳಲ್ಲಿ ಏನನ್ನು. ಹೇಗೆ, ಮತ್ತು ಏಕೆ ಬೋಧಿಸಬೇಕು ಎನ್ನುವುದನ್ನು ನಿರ್ಧರಿಸಲು ಸಹಾಯಕವಾಗುವಂತೆ ಮೂರು ಆಯಾಮಗಳನ್ನು ಅನ್ವಯಿಸಿಕೊಳ್ಳಲು ಈ ಪುಸ್ತಕದಾದ್ಯಂತ ನಿಮ್ಮನ್ನು ಆಹ್ವಾನಿಸಲಾಗಿದೆ.

## ಸಾಮಾಜಿಕ ಅಧ್ಯಯನ(ಗಳು) ಎಂದರೇನು? ಶಿಕ್ಷಣ ವಿಷಯ(discipline)ದ ವ್ಯಾಖ್ಯಾನ

ಸಾಮಾಜಿಕ ಅಧ್ಯಯನಗಳ ವ್ಯಾಖ್ಯಾನದ ಪ್ರಮುಖ ಸಂಘರ್ಷ, ಈ ವಿಭಾಗದ ಶೀರ್ಷಿಕೆಯಲ್ಲಿ ಅಡಕವಾಗಿದೆ: ಸಾಮಾಜಿಕ ಅಧ್ಯಯನವು ಏಕಮಾತ್ರ, ಏಕೀಕೃತ ಅಧ್ಯಯನ ಕ್ಷೇತ್ರವೆ, ಅಥವಾ ಸಾಮಾಜಿಕ ಅಧ್ಯಯನಗಳು ಸಂಬಂಧಿಸಿದ ಶಿಕ್ಷಣ ವಿಷಯಗಳ ಸರಣಿಯೆ? ಶಿಕ್ಷಣ ತಜ್ಞರಿಗೆ ಈ ಪ್ರಶ್ನೆಯನ್ನು ಇನ್ನೂ ಬಗೆಹರಿಸಲು ಸಾಧ್ಯವಾಗಿಲ್ಲ. ಅಕಾಡೆಮಿಕ್ ಶಿಕ್ಷಣ ವಿಷಯಗಳ ಜಗತ್ತಿನಲ್ಲಿ ಸಾಮಾಜಿಕ ಅಧ್ಯಯನಗಳು ತುಲನಾತ್ಮಕವಾಗಿ ಹೊಸ ವಿಷಯವಸ್ತುವಾಗಿದೆ. ಇದು 19 ಮತ್ತು 20ನೆ ಶತಮಾನಗಳಲ್ಲಿ ಆದ ಸಾರ್ವಜನಿಕ ಶಾಲೆಗಳ ವಿಸ್ತರಣೆಯ

ಪರಿಣಾಮವಾಗಿದೆ. ಈ ಅಧ್ಯಯನ ಕ್ಷೇತ್ರವನ್ನು ಪ್ರಾರಂಭದಲ್ಲಿ ಪ್ರಜಾಪ್ರಭುತ್ವೀಯ ಬದುಕಿನ ರಕ್ಷಣೆ; ವೃದ್ಧಿಸುತ್ತಿದ್ದ ಕೈಗಾರಿಕೀಕೃತ, ತಾಂತ್ರಿಕ ಆರ್ಥಿಕತೆಗೆ ಪೂರಕವಾದ ಕೌಶಲ್ಯದ ಸುಧಾರಣೆ; ಮತ್ತು ಸಾಮಾನ್ಯ ಜನಸಂಖ್ಯೆಗೆ ಸೇರ್ಪಡೆಗೊಳ್ಳುತ್ತಿದ್ದ ಬೃಹತ್ ಸಂಖ್ಯೆಯ ಹೊಸ ವಲಸೆಗಾರರ ಸಾಮಾಜೀಕರಣ, ಇವೇ ಮೊದಲಾದವುಗಳನ್ನು ಒಳಗೊಂಡ ಹಲವು ಅಗತ್ಯಗಳ ಪೂರೈಕೆಗಾಗಿ ವಿನ್ಯಾಸಗೊಳಿಸಲಾಯಿತು. ಇಂತಹ ವೈವಿಧ್ಯಮಯ ಉದ್ದೇಶಗಳ ಹಿನ್ನೆಲೆಯಲ್ಲಿ ಸಾಮಾಜಿಕ ಅಧ್ಯಯನಗಳು, ಇತಿಹಾಸ (ಪ್ರಾಚೀನ ಶಿಕ್ಷಣ ವಿಷಯ), ಸಾಮಾಜಿಕ ವಿಜ್ಞಾನಗಳು (ಅನುಭವಜನ್ಯ, ವೈಜ್ಞಾನಿಕ ಪರಂಪರೆಗಳಲ್ಲಿ ಮೂಲವನ್ನು ಹೊಂದಿದ), ಪೌರತ್ವ ತರಬೇತಿ (ರಾಷ್ಟ್ರೀಯತೆ ಮತ್ತು ಸಾಮಾಜಿಕ ವಿಮರ್ಶೆಗಳಿಂದ ವ್ಯುತ್ಪನ್ನಗೊಂಡ), ಮತ್ತು ಆತ್ಮ-ವಿಕಸನ (ಮನಃಶಾಸ್ತ್ರೀಯ ಮತ್ತು ಬಹುತ್ವದ ಅಥವಾ ಬಹುಸಾಂಸ್ಕೃತಿಕ ಪರಂಪರೆಗಳ ಮೂಲದೊಂದಿಗಿನ) ಇವೇ ಮುಂತಾದ ಹಲವು ಎಳೆಗಳ ಒಂದು ಸಮ್ಮಿಳನವಾಗಿರುವುದು ಆಶ್ಚರ್ಯದ ಸಂಗತಿಯಲ್ಲ.

ಎಡ್ಗರ್ ಬಿ.ವೆಸ್ಲಿಯ "ಕಲಿಕೆಯ ಉದ್ದೇಶಗಳಿಗಾಗಿ ಸಾಮಾಜಿಕ ವಿಜ್ಞಾನಗಳ ಸರಳೀಕರಣವೆ ಸಾಮಾಜಿಕ ಅಧ್ಯಯನವಾಗಿದೆ," ಎನ್ನುವ ಪ್ರಸಿದ್ಧ ವ್ಯಾಖ್ಯಾನವು ಸಾಮಾಜಿಕ ವಿಜ್ಞಾನಗಳು ಶಿಷಣ ವಿಷಯದ ಕೇಂದ್ರಬಿಂದುವಾಗಿದೆ ಎನ್ನುವುದನ್ನು ಸೂಚಿಸುತ್ತದೆ. ಈ ಹೇಳಿಕೆಗೆ ಹಲವರ ಭಿನ್ನಾಭಿಪ್ರಾಯವಿದೆ ಮತ್ತು ಸಾಮಾನ್ಯವಾಗಿ, ಮಾಧ್ಯಮಿಕ ಶಾಲೆಯ ಶಿಕ್ಷಕರ ಚಟುವಟಿಕೆಗಳನ್ನು ಇದು ಪ್ರತಿನಿಧಿಸುವುದಿಲ್ಲ. ಮಾಧ್ಯಮಿಕ ಶಾಲೆಗಳ ಸಾಮಾಜಿಕ ಅಧ್ಯಯನಗಳನ್ನು ಮಾನವನ ಇತಿಹಾಸ, ವರ್ತನೆ ಹಾಗೂ ಮೌಲ್ಯಗಳಿಗೆ ಸಂಬಂಧಿಸಿದ ದತ್ತಾಂಶಗಳ, ವಿಶ್ಲೇಷಣೆಗಳ, ಮತ್ತು ನೈತಿಕ ಸಂಗತಿಗಳ ಅಧ್ಯಯನ ಎಂದು ವ್ಯಾಖ್ಯಾನಿಸುವುದು ಹೆಚ್ಚು ನ್ಯಾಯೋಚಿತವಾದುದಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಶಾಲಾ ಕೊಠಡಿಯ ಸಾಮಾಜಿಕ ಅಧ್ಯಯನಗಳು ಎಂದರೆ ಜನರು ಹೇಗೆ ಮತ್ತು ಏಕೆ ಕ್ರಿಯಾಶೀಲರಾಗುತ್ತಾರೆ, ಅವರ ನಂಬಿಕೆಗಳೇನು, ಮತ್ತು ಎಲ್ಲಿ ಮತ್ತು ಹೇಗೆ ಅವರು ಬದುಕುತ್ತಾರೆ ಮತ್ತು ಬದುಕಿದರು ಎನ್ನುವುದರ ಕುರಿತಾಗಿದೆ. ಇದು ಬೃಹತ್ ವ್ಯಾಪ್ತಿಯನ್ನು ಹೊಂದಿದ ಮತ್ತು ಸ್ವಲ್ಪಮಟ್ಟಿಗೆ ಅಸ್ಪುಟವಾದ, ಆದರೆ ಬೋಧಕರಿಗೆ ವಿಷಯದ ಮತ್ತು ವಿಧಾನದ ಆಯ್ಕೆಯಲ್ಲಿ ಮುಕ್ತ ಅವಕಾಶವನ್ನು ನೀಡುವ ಕ್ರಿಯೆಗಳು, ಚಿಂತನೆಗಳು, ಮೌಲ್ಯಗಳು, ಕಾಲ, ಮತ್ತು ದೇಶಗಳನ್ನು ಕುರಿತಾದ ಹಲವು ವಿಷಯಗಳ ಸರಣಿಯಾಗಿದೆ.

ಸಾಮಾಜಿಕ ಅಧ್ಯಯನಗಳು ಎಂದರೇನು, ಮತ್ತು ಹೇಗಿರಬೇಕು ಎನ್ನುವುದರ ಬಗ್ಗೆ ಸೈದ್ಧಾಂತಿಕ ಸ್ತರದಲ್ಲಿ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ ಮತ್ತು ಮುಂದೆಯೂ ನಡೆಯುತ್ತದೆಯಾದರೂ, ಆಚರಣೆಯ ಹಂತದಲ್ಲಿ, ಬಹಳಷ್ಟು ಮಾಧ್ಯಮಿಕ ಹಂತದ ಕಲಿಕೆಯನ್ನು, ರಾಜ್ಯ ಮತ್ತು ಸ್ಥಳೀಯ ಅಗತ್ಯಗಳಿಂದ ಕಡ್ಡಾಯಗೊಳಿಸಲ್ಪಟ್ಟ ವಿಷಯವಸ್ತು ಮತ್ತು ಪಾಠ್ಯಕ್ರಮಗಳಿಂದ ವ್ಯಾಖ್ಯಾನಿಸಲಾಗಿದೆ. ಅದು ಜಿಲ್ಲೆಯಿಂದ ಜಿಲ್ಲೆಗೆ ಒಂದೇ ತೆರನಾಗಿರುತ್ತದೆ. ಆದರೆ, ನಿಮ್ಮ ಶೈಲಿ ಮತ್ತು ತತ್ವವಿಚಾರವು ನಿಮ್ಮದೇ ಆಗಿರುತ್ತದೆ. ಸಾಮಾಜಿಕ ಅಧ್ಯಯನಗಳ ಬೋಧಕರಾಗಿ ನೀವು ವಿವಿಧ ಚಿಂತನಾ ಶಾಖೆಗಳನ್ನು ಮತ್ತು ಅವುಗಳ ಹಿಂದಿರುವ ವಿವೇಚನೆಯನ್ನು ಅರ್ಥಮಾಡಿಕೊಳ್ಳಬೇಕು, ಮತ್ತು ಈ ಅರ್ಥೈಸುವಿಕೆಯಿಂದ ವಿಷಯವನ್ನು ಕುರಿತ ನಿಮ್ಮ ಮತ್ತು ನಿಮ್ಮ ಕೇಳುಗರ ದೃಷ್ಟಿಕೋನಕ್ಕೆ ಸರಿಹೊಂದುವಂತೆ ತತ್ವವಿಚಾರವನ್ನು ನಿಧಾನವಾಗಿ ಎಚ್ಚರಿಕೆಯಿಂದ ಬೆಳೆಸಿಕೊಳ್ಳಬೇಕು. ಹಲವು ಅಭಿಪ್ರಾಯಗಳನ್ನು ಒಳಗೊಳ್ಳುವ ಪ್ರಯತ್ನವೊಂದರ ನಿಟ್ಟಿನ ವಿಭಿನ್ನದರ್ಶನಗ್ರಹಣ (eclecticism) ಅಥವಾ ಒಂದು ನಿರ್ದಿಷ್ಟ ಅಭಿಪ್ರಾಯಕ್ಕೆ ಬದ್ಧರಾಗಿರುವುದು, ಇವೆರಡರಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎನ್ನುವುದು ಇಲ್ಲಿನ ಪ್ರಮುಖ

ಸಂಗತಿಯಾಗಿದೆ. ಹಲವು ವಿಷಯಗಳು, ಅಭಿಪ್ರಾಯಗಳು, ಮತ್ತು ತಂತ್ರಗಳನ್ನು ಸಂಗ್ರಹಿಸುವ ಸಾರಸಂಗ್ರಹಿ ದೃಷ್ಟಿಕೋನವು ಶಾಲಾಕೊಠಡಿಯಲ್ಲಿ ಸರಿಯಾದುದಾಗಿ ಕಾಣಬಹುದು, ಆದರೆ ಇದು ಗುರಿಗಳ ಬಗ್ಗೆ ಗೊಂದಲವನ್ನು ಮೂಡಿಸಬಹುದು, ಮತ್ತು ವಿಷಯವಸ್ತುವಿನ ನಿಟ್ಟಿನಲ್ಲಿ ಅಸಮಂಜಸತೆ ಮತ್ತು ಅಸಂಘಟಿತ ದೃಷ್ಟಿಕೋನವನ್ನು ಹುಟ್ಟುಹಾಕಬಹುದು. ಏಕ-ಕೇಂದ್ರಿತ ದೃಷ್ಟಿಕೋನವು ಒಂದು ಸ್ಪಷ್ಟವಾದ ಸುಸಂಗತ ಫಲಿತಾಂಶಗಳನ್ನು ನೀಡಬಹುದು, ಆದರೆ ಇದು ನಿಮ್ಮನ್ನು ಮತ್ತು ನಿಮ್ಮ ವಿದ್ಯಾರ್ಥಿಗಳನ್ನು ವಿಷಯಗಳ ಸಂಕುಚಿತ ವ್ಯಾಪ್ತಿಗೆ ಸೀಮಿತಗೊಳಿಸಬಹುದು.

ಸಾಮಾಜಿಕ ವಿಜ್ಞಾನಗಳು, ಇತಿಹಾಸ, ಪೌರತ್ವ, ಸಾಮಾಜಿಕ ಕ್ರಿಯೆ, ಮತ್ತು ವ್ಯಕ್ತಿಗತ ಬೆಳವಣಿಗೆಗಳ ಪ್ರತಿಪಾದಕರು ಸಾಮಾಜಿಕ ಅಧ್ಯಯನಗಳಿಗೆ ಜೀವ ತುಂಬಲು, ಅದರ ಗುರಿಯನ್ನು ನಿಗದಿಪಡಿಸಲು, ಮತ್ತು ಶಾಲಾಕೊಠಡಿಯಲ್ಲಿ ಜರುಗುವ ಚಟುವಟಿಕೆಗಳನ್ನು ನಿರ್ದೇಶಿಸಲು ಅದಕ್ಕೆ ಒಂದು ವಿಭಿನ್ನವಾದ "ಹೃದಯ"ವನ್ನು ಕೊಡಬಯಸುತ್ತಾರೆ. ಪ್ರತಿಯೊಂದು ನಿಲುವೂ ವಿಭಿನ್ನ ತಾತ್ವಿಕ ತಳಹದಿಯಿಂದ ಪ್ರೇರೇಪಿಸಲ್ಪಟ್ಟಿರುತ್ತದೆ, ಮತ್ತು ಕಲಿಕೆಯ ಸಾಮಗ್ರಿ, ವಿಧಾನ, ಮತ್ತು ಫಲಿತಾಂಶಗಳಿಗಾಗಿ ವಿವಿಧ ಬಗೆಯ ಮಾನದಂಡಗಳಿಗೆ ಒತ್ತನ್ನು ನೀಡುತ್ತದೆ. ಉದಾಹರಣೆಗೆ, ಚಿಂತನಶೀಲ ಸಾಮಾಜಿಕ ವಿಜ್ಞಾನದ ಪಾಠವೊಂದರಲ್ಲಿ, ಮುಸಲೋನಿ ಅಥವಾ ಹಿಟ್ಲರ್‌ನಂತಹ ಒಂದು ಉದಾಹರಣೆಯ ಬದಲು ನಿರಂಕುಶಾಧಿಕಾರಿಗಳ ಉಗಮಕ್ಕೆ ಕಾರಣಗಳನ್ನು ವಿಶ್ಲೇಷಿಸಲು ವಿದ್ಯಾರ್ಥಿಗಳನ್ನು ಕೇಳಬಹುದು. ನೀತಿಬೋಧಕ ಇತಿಹಾಸದ ಪಾಠವು ಸಂಕೀರ್ಣ ಅವಧಿಯ ಅಮೇರಿಕಾದ ಕ್ರಾಂತಿಯ ರಾಜ್ಯನೀತಿಯ ಕಾರಣ ಹಾಗೂ ಪರಿಣಾಮಗಳ ಪಟ್ಟಿಯನ್ನು ನೀಡಬಹುದು. ಮತದಾನದ ಹಕ್ಕುಗಳು ಮತ್ತು ಜವಾಬ್ದಾರಿಗಳನ್ನು ಕೇಂದ್ರೀಕರಿಸಿದ ಚರ್ಚೆಯ ಮೂಲಕ ಪೌರತ್ವ-ಕೇಂದ್ರಿತ ವಿಷಯಗಳನ್ನು ಪ್ರತಿನಿಧಿಸಬಹುದು. ಒಂದು ಸಾಮಾಜಿಕ ಕ್ರಿಯಾ ದೃಷ್ಟಿಕೋನವು ವಿದ್ಯಾರ್ಥಿಗಳಿಗೆ ಜಾಗತಿಕ ಹಸಿವಿನಂತಹ ವಿಷಯಗಳ ಅಧ್ಯಯನವನ್ನು ಮಾಡಲು, ಅದನ್ನು ಹೇಗೆ ಎದುರಿಸಬೇಕು ಎನ್ನುವ ಕುರಿತು ಸ್ಪಷ್ಟ ನಿಲುವನ್ನು ತೆಗೆದುಕೊಳ್ಳಲು ಮತ್ತು ಈ ನಿಟ್ಟಿನಲ್ಲಿ ಸಕ್ರಿಯ ಯೋಜನೆಯೊಂದನ್ನು ಕಾರ್ಯರೂಪಕ್ಕೆ ತರಲು ಕೇಳಬಹುದು. ಸಮುದಾಯಕ್ಕೆ ವಿದ್ಯಾರ್ಥಿಗಳು ಕೊಡುಗೆಯನ್ನು ಸಲ್ಲಿಸುವ ಕಾರಣ, ವ್ಯಕ್ತಿಗತ ಅಥವಾ ಚಾರಿತ್ರ್ಯ ವಿಕಾಸಕ್ಕೆ ಒತ್ತು ನೀಡುವ ಪಾಠವು ಸೇವೆಯ ಕಲಿಕೆ ಅಥವಾ ಸಾಮಾಜಿಕವಾಗಿ ಕ್ರಿಯಾಶೀಲತೆಯನ್ನು ಒಳಗೊಂಡಿರಬಹುದು. ಹೀಗೆ ವ್ಯಾಖ್ಯಾನದಲ್ಲಿ ಮಾತ್ರವಲ್ಲ, ಆಯ್ಕೆಯಲ್ಲಿಯೂ ಗೊಂದಲವಿದೆ: ಪರಿಕಲ್ಪನೆಗಳನ್ನು ಸಮಗ್ರಗೊಳಿಸುವ ಮತ್ತು ಏಕ ಘಟಕದಲ್ಲಿ ಅವುಗಳನ್ನು ಮಿಳಿತಗೊಳಿಸುವ ಮೂಲಕ ಅವುಗಳ ನಡುವಿನ ಪರಸ್ಪರ ಸಂಘರ್ಷವನ್ನು ನಿವಾರಿಸಲು ಪ್ರಯತ್ನಿಸಬೇಕೇ? ಅಥವಾ, ಪರಸ್ಪರ ಸ್ಪರ್ಧಿಸುತ್ತಿರುವ ಪರಿಕಲ್ಪನೆಗಳಲ್ಲಿ ಒಂದನ್ನು ಒಪ್ಪಿಕೊಂಡು ಮತ್ತು ಬಳಸಿಕೊಂಡು ಶಾಲಾಕೊಠಡಿಯ ಎಲ್ಲ ಚಟುವಟಿಕೆಗಳನ್ನು ನಿರ್ದೇಶಿಸಬೇಕೇ? ಒಟ್ಟಾರೆಯಾಗಿ, ಇಂತಹ ವೈವಿಧ್ಯಮಯ ಮತ್ತು ವಿಚ್ಛಿನ್ನ (fragmented) ಕ್ಷೇತ್ರದ ಬಗ್ಗೆ ನಮ್ಮ ಆಲೋಚನೆಗಳನ್ನು ಹೇಗೆ ಸಂಘಟಿಸಬಹುದು?

### ನಾವು ನಿರ್ಧರಿಸೋಣ

ಕನಿಷ್ಠ ಮೂವರು ಸಹೋದ್ಯೋಗಿಗಳು ಮತ್ತು ಸಹಪಾಠಿಗಳ ಒಂದು ಗುಂಪಿನಲ್ಲಿ, ಸಾಮಾಜಿಕ ಅಧ್ಯಯನಗಳ ನಿಮ್ಮದೇ ಆದ ವ್ಯಾಖ್ಯಾನವನ್ನು ಬರೆಯಿರಿ ಮತ್ತು ನಿಮ್ಮ ಅಭಿಪ್ರಾಯವನ್ನು ಇತರರೊಂದಿಗೆ ಹಂಚಿಕೊಳ್ಳಿ. ಪ್ರತಿಯೊಬ್ಬರ ಅಭಿಪ್ರಾಯವು ಹೆಚ್ಚು ಕಡಿಮೆ ಒಂದೇ ಆಗಿದೆಯೆ ಅಥವಾ ಭಿನ್ನವಾಗಿದೆಯೆ, ಮತ್ತು ಏಕೆ?

ಸಂಘಟನ ತತ್ವಗಳು

ತ್ರಿ-ವಿಭಾಗೀಯ ದೃಷ್ಟಿಕೋನ. ಸಾಮಾಜಿಕ ಅಧ್ಯಯನಗಳ ಹಲವು ಸಂಘಟನ ಪರಿಕಲ್ಪನೆಗಳು ವಿಷಯವಸ್ತುವಿನ ಚಲನಶೀಲತೆ ಮತ್ತು ಒತ್ತಡಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ. ಉದಾಹರಣೆಗೆ, ಬಾರ್, ಬಾರ್ಥ್, ಮತ್ತು ಶೆರ್ಮಿಸ್ ಇವರುಗಳು ಸಾಮಾಜಿಕ ಅಧ್ಯಯನಗಳನ್ನು ಮೂರು ಪದ್ಧತಿಗಳಾಗಿ ವಿಭಜಿಸುವ ಯೋಜನೆಯ ಪರವಾಗಿದ್ದಾರೆ: ಮೊದಲನೆಯದು, ಸಾಮಾಜಿಕ ವಿಜ್ಞಾನವನ್ನು ಉತ್ತೇಜಿಸಲು, ಎರಡನೆಯದು ಪೌರತ್ವವನ್ನು ಉತ್ತೇಜಿಸಲು, ಮತ್ತು ಮೂರನೆಯದು ಚಿಂತನಶೀಲ ವಿಶ್ಲೇಷಣೆಯನ್ನು ಉತ್ತೇಜಿಸಲು.

ಸಾಮಾಜಿಕ ವಿಜ್ಞಾನದ ಪದ್ಧತಿಯು ವೈಜ್ಞಾನಿಕ ವಿಧಾನವನ್ನು ಕೇಂದ್ರವಾಗಿಟ್ಟುಕೊಂಡು ವಿವಿಧ ಸಾಮಾಜಿಕ ವಿಜ್ಞಾನಗಳ ಕಾಣ್ಕೆಗಳನ್ನು, ಪರಿಕಲ್ಪನೆಗಳನ್ನು, ಮತ್ತು ನಿಯಮಗಳನ್ನು ಮುಂದಿಡುತ್ತದೆ. ಸಾಮಾಜಿಕ ವರ್ಗ, ಸಂಸ್ಕೃತಿ, ಸ್ಥಳ, ಅಧಿಕಾರ, ಅಥವಾ ಮಾರುಕಟ್ಟೆ ವ್ಯವಸ್ಥೆಗಳು ಈ ದೃಷ್ಟಿಕೋನದ ಆಯೋಜನ ವಿಚಾರಗಳಾಗಿರುತ್ತವೆ. ಈ ಪದ್ಧತಿಯು ಸಾಮಾಜಿಕ ವಿಜ್ಞಾನಿಗಳಿಗೆ ಲಭ್ಯವಿರುವ ವಿಚಾರಗಳನ್ನು, ಕೌಶಲ್ಯಗಳನ್ನು, ಮತ್ತು ದತ್ತಾಂಶಗಳ ಮಾದರಿಯೊಂದನ್ನು "ಯುವಜನರು ನಿರ್ವಹಿಸಲು ಸಾಧ್ಯವಾಗುವಷ್ಟು ಕಡಿತಗೊಳಿಸಿ" ದ್ವಿತೀಯ ಹಂತದ ವಿದ್ಯಾರ್ಥಿಗಳಿಗೆ ಕೊಡಬಯಸುತ್ತದೆ. ಅಂತಿಮವಾಗಿ, ಬಾರ್, ಬಾರ್ಥ್, ಮತ್ತು ಶ್ರೆಮಿಸ್‌ರವರು ಮಾನವ ವರ್ತನೆಗೆ ಸಂಬಂಧಿಸಿದ ಸಾಮಾನ್ಯೀಕರಣ, ಮತ್ತು ವಿಶ್ಲೇಷಣೆಗಳನ್ನು ಪ್ರೋತ್ಸಾಹಿಸುವ ಪೌರತ್ವ ಶಿಕ್ಷಣವನ್ನು ಬೆಂಬಲಿಸುವ ರೀತಿಯಲ್ಲಿ ಸಾಮಾಜಿಕ ವಿಜ್ಞಾನಗಳನ್ನು ನೋಡುತ್ತಾರೆ.

ಮೂಲಭೂತವಾಗಿ, ಪೌರತ್ವ ಪ್ರಸರಣಾ ದೃಷ್ಟಿಕೋನವು ಪ್ರಜಾಪ್ರಭುತ್ವದಲ್ಲಿ ಆದರ್ಶ ಭಾಗೀದಾರಿಕೆಯನ್ನು ವಿಕಸಿತಗೊಳಿಸುವ ಆಶಯದಿಂದ ಅಮೇರಿಕಾದ ಸಮಾಜಕ್ಕೆ ಬೇಕಾಗಿರುವ ಗುರಿಗಳು ಮತ್ತು ನಿರೀಕ್ಷೆಗಳನ್ನು ಬೋಧಿಸಲು ಒತ್ತು ನೀಡುತ್ತದೆ. ಸಂಸ್ಕೃತಿಯನ್ನು ಮತ್ತು ಅದರ ಮೌಲ್ಯಗಳನ್ನು ಅರ್ಥಮಾಡಿಕೊಂಡು ಅದರೊಳಗೆ ಪರಿಣಾಮಕಾರಿಯಾಗಿ ಬದುಕುವ ವ್ಯಕ್ತಿಯು ಇದರ ಅಪೇಕ್ಷಿತ ಫಲಿತವಾಗಿರುತ್ತದೆ. ವಿದ್ಯಾರ್ಥಿಗಳಿಗೆ ತಮ್ಮ ವೃತ್ತಿಯ ಆಯ್ಕೆ ಮತ್ತು ವ್ಯಕ್ತಿಗತ ವಿಕಸನಕ್ಕೆ ಸಹಾಯ ಮಾಡುತ್ತಲೇ, ಅವರು ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳನ್ನು ಬೆಂಬಲಿಸಲು ಮತ್ತು ಆ ನಿಟ್ಟಿನಲ್ಲಿ ವಿಮರ್ಶಾತ್ಮಕವಾಗಿರಲು ಅಗತ್ಯವಾದ ಪ್ರಜಾಪ್ರಭುತ್ವದ ನಂಬಿಕೆಗಳು ಮತ್ತು ಗಾಢವಾದ ಒಲವನ್ನು ಬಿತ್ತುವುದು ಪ್ರಸರಣಕಾರರ ಉದ್ದೇಶವಾಗಿರುತ್ತದೆ. "ಸಾಂಸ್ಕೃತಿಕ ಉಳಿವನ್ನು ಖಾತ್ರಿಪಡಿಸುವ ನಾಗರಿಕರ ಭಾವೀ ಪೀಳಿಗೆಯನ್ನು ಬೆಳೆಸುವುದು" ಪೌರತ್ವ ಪ್ರಸರಣಾ ಪದ್ಧತಿಯ ಉದ್ದೇಶವಾಗಿರುತ್ತದೆ ಎಂದು ಬಾರ್, ಬಾರ್ಥ್, ಮತ್ತು ಶ್ರೆಮಿಸ್‌ರವರು ಅಭಿಪ್ರಾಯಪಡುತ್ತಾರೆ.

ಮೂರನೆಯ ಪದ್ಧತಿಯಾದ ಚಿಂತನಶೀಲ ವಿಶ್ಲೇಷಣೆಯೆಂಬ ನಿಟ್ಟಿನಲ್ಲಿ ಬೋಧಿಸಲ್ಪಡುವ ಸಾಮಾಜಿಕ ಅಧ್ಯಯನಗಳ ಮೂರನೆಯ ಪದ್ಧತಿಯು ವಿಷಯವಸ್ತು ಮತ್ತು ಅರಿವು ಹಾಗೂ ಮೌಲ್ಯೀಕರಣದ ಪ್ರಕ್ರಿಯೆ, ಇವೆರಡಕ್ಕೂ ಅಳವಡಿಸಲಾದ ವಿಶ್ಲೇಷಣೆ ಮತ್ತು ನಿರ್ಧಾರ ಕೈಗೊಳ್ಳುವಿಕೆಯನ್ನು ವಿದ್ಯಾರ್ಥಿಗಳ ಶಾಲಾಕೊಠಡಿಯ ಕೇಂದ್ರಸ್ಥ ವಿಷಯವಾಗಿ ಪ್ರಸ್ತಾಪಿಸುತ್ತದೆ. ವಿಧಾನ ಮತ್ತು ವಿಷಯವಸ್ತುಗಳು, ತೀರ್ಮಾನಗಳು, ಮತ್ತು ಸಿದ್ಧಾಂತಗಳು ಸಾರಾಂಶ ನಿರ್ಣಯಗಳೊಂದಿಗೆ ನಿಕಟ ಸಂಬಂಧವನ್ನು ಹೊಂದಿರುತ್ತವೆ. ಇವೆಲ್ಲವೂ ವಿಮರ್ಶಾತ್ಮಕ ವ್ಯಾಖ್ಯೆಗೊಳಪಟ್ಟಿರುತ್ತವೆ. ಸಮಸ್ಯೆಯ ಬಗೆಹರಿಸುವಿಕೆ ಮತ್ತು ವಿಮರ್ಶಾತ್ಮಕ ಚಿಂತನೆಗಳು ಚಿಂತನಶೀಲ ವಿಶ್ಲೇಷಣಾ ಪರಂಪರೆಯ ಅವಿಭಾಜ್ಯ ಅಂಶವಾಗಿರುತ್ತವೆ; ಜಗತ್ತನ್ನು ಅರ್ಥಮಾಡಿಕೊಳ್ಳಲು ಸಂದಿಗ್ಧತೆಗಳು ಮತ್ತು ಅಜ್ಞಾತ ಸಂಗತಿಗಳನ್ನು ಎದುರಿಸಬೇಕಾದ ಪರಿಸ್ಥಿತಿಯಲ್ಲಿ ವಿದ್ಯಾರ್ಥಿ/ನಿಯು ಇರುತ್ತಾನೆ/ಳೆ. ಬಾರ್, ಬಾರ್ಥ್, ಮತ್ತು

ಶ್ರೆಮಿಸ್ ಪ್ರಕಾರ "ಮಹತ್ವದ *ಪ್ರಶ್ನೆಗಳನ್ನು ಕೇಳುವ ಮತ್ತು ತೃಪ್ತಿಕರ ಉತ್ತರಗಳನ್ನು ಕಂಡುಕೊಳ್ಳುವ* ಹಾಗೆ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಉತ್ತಮಪಡಿಸಲು ಅನುವುಮಾಡಿಕೊಡುವ ಎಲ್ಲ ಕೌಶಲ ಮತ್ತು ಕಾರ್ಯನೀತಿಗಳನ್ನು ಒಳಗೊಳ್ಳುವುದೇ" ಶೋಧನಾ ಪ್ರಕ್ರಿಯೆಯಾಗಿರುತ್ತದೆ.

ಉದ್ದೇಶ, ವಿಧಾನ, ಮತ್ತು ವಿಷಯವಸ್ತುಗಳನ್ನು ಸಹಸಂಬಂಧಿಗಳನ್ನಾಗಿಸಲು ಮೂರು ಪದ್ಧತಿಗಳನ್ನು ಉಪಯೋಗಿಸಿಕೊಳ್ಳುವ ಮೂಲಕ ಒಟ್ಟು ಯೋಜನೆಯನ್ನು ಹೀಗೆ ಸಾರಾಂಶೀಕರಿಸಬಹುದು:

| | |
|---|---|
| ಪದ್ಧತಿ I | ಪೌರತ್ವ/ಸಾಂಸ್ಕೃತಿಕ ಪ್ರಸರಣ/ರಾಷ್ಟ್ರೀಯ ಮೌಲ್ಯಗಳು ಮತ್ತು ಪರಂಪರೆ |
| ಪದ್ಧತಿ II | ಚಿಂತನಶೀಲ ಆಲೋಚನೆ/ಶೋಧನಾ-ಸಮಸ್ಯೆಯ ಬಗೆಹರಿಸುವಿಕೆ/ಸಾಮಾಜಿಕ ವಿಮರ್ಶೆ |
| ಪದ್ಧತಿ III | ಸಾಮಾಜಿಕ ವಿಜ್ಞಾನ/ವೈಜ್ಞಾನಿಕ ವಿಧಾನ ಮತ್ತು ಪ್ರಯೋಗಾತ್ಮಕತೆ/ಸತ್ಯದ ಹುಡುಕಾಟ |

**ಪಂಚ-ವಿಭಾಗೀಯ ದೃಷ್ಟಿಕೋನ**. ಬ್ರುಬೇಕರ್, ಸೈಮನ್, ಮತ್ತು ವಿಲಿಯಮ್ಸ್ ಅದೇ ರೀತಿಯ ಆಯೋಜನಾ ಯೋಜನೆಯೊಂದನ್ನು ಸೂಚಿಸಿದರು. ಅವರ ಮಾದರಿಯು ಪೌರತ್ವ, ಸಾಮಾಜಿಕ ವಿಜ್ಞಾನಗಳು, ಇತಿಹಾಸ, ಮತ್ತು ಚಿಂತನಶೀಲ ಶೋಧನೆಯನ್ನು ಒಳಗೊಳ್ಳುತ್ತದೆಯಾದರೂ, ವಿದ್ಯಾರ್ಥಿ ಉನ್ಮುಖ ಪದ್ಧತಿ ಮತ್ತು ಒಂದು ಸಮಾಜೋರಾಜಕೀಯ "ಒಳಗೊಳ್ಳುವಿಕೆ' ಅಥವಾ ಭಾಗೀದಾರಿ ಪದ್ಧತಿಯನ್ನು ಸೇರಿಸುತ್ತದೆ. ಸ್ವ-ಸಂವರ್ಧನೆ ಮತ್ತು ಆತ್ಮ-ವಿಶ್ವಾಸವನ್ನು ಬೆಳೆಸುವುದು ವಿದ್ಯಾರ್ಥಿ ಉನ್ಮುಖ ಪದ್ಧತಿಯ ಉದ್ದೇಶವಾಗಿರುತ್ತದೆ; ಇದು ಸಾಂಸ್ಕೃತಿಕ ಎಚ್ಚರವನ್ನೂ ಒಳಗೊಂಡಿರುತ್ತದೆ. ಲೇಖಕರು ಸಾಮಾಜಿಕ ಅಧ್ಯಯನಗಳನ್ನು ಕುಟುಂಬ ಮತ್ತು ಸಾಮಾಜಿಕ ಸಂಬಂಧಗಳ ಯಶಸ್ಸಿನ ಗುರಿಯನ್ನು ಹೊಂದಿದ ಸ್ವಂತಿಕೆಯ ಮನಃಶಾಸ್ತ್ರೀಯ ಗ್ರಹಿಕೆಯನ್ನು ಬಲಗೊಳಿಸುವ ಮತ್ತು ಅಸ್ಮಿತೆಯನ್ನು ನಿರ್ಮಿಸುವ ವಾಹಕವಾಗಿ ನೋಡುತ್ತಾರೆ. ಸಮಾಜೋರಾಜಕೀಯ ಒಳಗೊಳ್ಳುವಿಕೆ ಎನ್ನುವುದು ಕೆಲವರು ಯಾವುದನ್ನು ಸಾಮಾಜಿಕ ವಿಮರ್ಶೆ ಅಥವಾ ರಾಜಕೀಯ ಕ್ರಿಯಾಶೀಲತೆ ಎಂದು ಕರೆಯುತ್ತಾರೋ ಅದರ ಒಂದು ಹಣೆಪಟ್ಟಿಯಾಗಿದೆ. ಈ ಸಂದರ್ಭದಲ್ಲಿ ರಾಜಕೀಯ ಕ್ರಿಯಾಶೀಲತೆಯನ್ನು ಉತ್ತೇಜಿಸುವುದು ಸಾಮಾಜಿಕ ಅಧ್ಯಯನಗಳ ಮುಖ್ಯ ಉದ್ದೇಶವಾಗಿದೆ. ಇದು ಸಾಮಾಜಿಕ ನ್ಯಾಯ, ವಾಕ್ ಮತ್ತು ಸಭೆ ಸೇರುವ ಸ್ವಾತಂತ್ರ್ಯ, ಅಂತಾರಾಷ್ಟ್ರೀಯ ಶಾಂತಿ ಮೊದಲಾದ ಗುರಿಗಳನ್ನು ತಲುಪಲು ಕ್ರಿಯಾಶೀಲರಾಗಿರುವುದನ್ನೂ ಸಹ ಒಳಗೊಂಡಿರುತ್ತದೆ.

ಉಲ್ಲೇಖಿಸಿದ ಎರಡೂ ಅಧ್ಯಯನಗಳು ಸಮಾನವಾದ ಅಂಶಗಳನ್ನು ಹೊಂದಿವೆ ಮತ್ತು ಮೂರು ಪ್ರಮುಖ ಆಯಾಮಗಳನ್ನು ದರ್ಶಿಸುತ್ತವೆ: ನೀತಿಬೋಧಕ, ಚಿಂತನಶೀಲ, ಮತ್ತು ಭಾವಾತ್ಮಕ. ವಿಶೇಷವಾಗಿ ಸಾಮಾಜಿಕ ವಿಜ್ಞಾನ ಮತ್ತು ಇತಿಹಾಸಗಳು ವಿಷಯವಸ್ತುವಿನ ಜ್ಞಾನವನ್ನು ಉತ್ತೇಜಿಸುವಲ್ಲಿ ನೀತಿಬೋಧಕ ಉದ್ದೇಶವಿರುತ್ತದೆ. ಚಿಂತನಶೀಲ ಶೋಧನೆ ಮತ್ತು ವಿಮರ್ಶಾತ್ಮಕ ಚಿಂತನೆ ಬಹಳಷ್ಟು ಮಟ್ಟಿಗೆ ನಮ್ಮ ಚಿಂತನಶೀಲ ಆಯಾಮದ ರೀತಿಯಲ್ಲೇ ಇರುತ್ತವೆ, ಏಕೆಂದರೆ ವಿವೇಚನೆಯು ಪ್ರಾಥಮಿಕವಾಗಿರುತ್ತದೆ. ಪೌರತ್ವವು ಒಳಗೊಂಡಿರುವ ನೈತಿಕ ಮೌಲ್ಯಗಳು, ಸಾಮಾಜಿಕ ವಿಮರ್ಶೆ, ಸ್ವ-ವಿಶ್ಲೇಷಣೆ, ಮತ್ತು ಸಾರ್ವಜನಿಕ ವಿವಾದ-ನಿರ್ಣಯದ ಪ್ರಭಾವಗಳನ್ನು ಸ್ಪಷ್ಟವಾಗಿ ಒಳಗೊಂಡಿದ್ದು, ಇದು ಭಾವಾತ್ಮಕ ಆಯಾಮಕ್ಕೆ ಸರಿಹೊಂದುತ್ತದೆ.

ಸಂಶೋಧನಾ ವರದಿ

1977ರಲ್ಲಿ ಇರ್ವಿಂಗ್ ಮೊರಿಸ್ಸೆಟ್ ಅವರು ಉಪಾಧ್ಯಾಯರ ದಾರ್ಶನಿಕ ಒಲವನ್ನು ಕುರಿತಂತೆ ಸಮಾಜ ವಿಜ್ಞಾನ ಶಿಕ್ಷಣ ಒಕ್ಕೂಟಕ್ಕೆ ಆಯೋಜಿಸಿದ ಸಮೀಕ್ಷೆಯು ಸಮಾಜ ಅಧ್ಯಯನಗಳ ಕುರಿತಾದ ಐದು-ಆಯಾಮಗಳ ದೃಷ್ಟಿಕೋನವನ್ನು ಬೆಂಬಲಿಸುತ್ತದೆ. ಈ ಅಧ್ಯಯನದಲ್ಲಿ ಸಮೀಕ್ಷೆಗೊಳಗಾದ ಬಹಳಷ್ಟು ಬೋಧಕರು ಐದು ಪ್ರಮುಖ ಕ್ಷೇತ್ರಗಳಲ್ಲಿ ಸಾಮಾಜಿಕ ಅಧ್ಯಯನಗಳನ್ನು ಒಳಗೊಂಡ ಒಂದು ಅಥವಾ ಅದಕ್ಕಿಂತಲೂ ಹೆಚ್ಚು ಕ್ಷೇತ್ರಗಳನ್ನು ಗುರುತಿಸಿದರು.

1. ಸಂಸ್ಕೃತಿ ಮತ್ತು ಇತಿಹಾಸದ ಪ್ರಸರಣ.
2. ವ್ಯಕ್ತಿಗತ ಬೆಳವಣಿಗೆಯ ಬದುಕಿನ ಅನುಭವಗಳು
3. ಚಿಂತನಶೀಲ ಅಥವಾ ವಿಮರ್ಶಾತ್ಮಕ ಆಲೋಚನೆ ಮತ್ತು ಶೋಧನೆ.
4. ಸಾಮಾಜಿಕ ವಿಜ್ಞಾನಗಳ ಪ್ರಕ್ರಿಯೆಗಳು ಮತ್ತು ಅಧ್ಯಯನದ ವಿಷಯವಸ್ತು.
5. ರಾಜಕೀಯ ಕ್ರಿಯಾಶೀಲತೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದ ಸಾಮಾಜಿಕ ಮತ್ತು ರಾಜಕೀಯ ವಿವಾದಗಳ ಅಧ್ಯಯನ.

ಈ ರೂಪರೇಖೆಯಲ್ಲಿ ವಿದ್ಯಾರ್ಥಿಗಳಿಗೆ ಗತಕಾಲದ ಜ್ಞಾನ ಮತ್ತು ಪೌರತ್ವದ ಮೌಲ್ಯಗಳನ್ನು ಕೊಡುವಲ್ಲಿ ಇತಿಹಾಸವನ್ನು ಒಂದು ಪ್ರಮುಖ ಕೊಂಡಿಯನ್ನಾಗಿ ನೋಡಲಾಗಿದೆ. ಒಟ್ಟಾರೆಯಾಗಿ ಸಾಮಾಜಿಕ ವಿಜ್ಞಾನಗಳು ವೈಜ್ಞಾನಿಕ/ವಿಶ್ಲೇಷಣಾತ್ಮಕ ಚೌಕಟ್ಟನ್ನು ಕೊಡುತ್ತವೆ ಎನ್ನುವ ಹಾಗೆ ಪರಿಭಾವಿಸಲಾಗಿದೆ. ಸಾಮಾಜಿಕ ಚರ್ಚಾಂಶಗಳು ಮತ್ತು ಸಮಸ್ಯೆಯ ನಿವಾರಣೆಯ ಪರಿಶೋಧನೆಯ ಮೂಲಕ ಚಿಂತನಶೀಲ ಶೋಧನೆಯು ವಿದ್ಯಾರ್ಥಿಗಳ ಆಲೋಚನೆಗಳನ್ನು ಉತ್ತೇಜಿಸುತ್ತದೆ. ಕ್ರಿಯಾತ್ಮಕ ದೃಷ್ಟಿಕೋನವು ಶಾಲೆಯಲ್ಲಿ ಮತ್ತು ಹೊರ ಜಗತ್ತಿನಲ್ಲಿ ನೈಜ ರಾಜಕೀಯ ಪ್ರಕ್ರಿಯೆಗಳಲ್ಲಿ ಮತ್ತು ನಾಯಕತ್ವದಲ್ಲಿ ತೊಡಗಿಸಿಕೊಳ್ಳುವುದನ್ನು ಉತ್ತೇಜಿಸುತ್ತದೆ. ಅಂತಿಮವಾಗಿ ವಿದ್ಯಾರ್ಥಿ-ಕೇಂದ್ರಿತ ದೃಷ್ಟಿಕೋನವು ವಿಶೇಷವಾಗಿ ವ್ಯಕ್ತಿಗತ ನಂಬಿಕೆಗಳು ಮತ್ತು ಆಳವಾಗಿ ಬೇರೂರಿರುವ ಮೌಲ್ಯಗಳ ಕುರಿತಾದ ಚರ್ಚೆಗಳ ಮೂಲಕ ಸಮಾಜದ ಇತರರಿಗೆ ಸಂಬಂಧಿಸಿದಂತೆ, ಸ್ವಯಂ ಪ್ರಶಂಸೆ ಮತ್ತು ತಿಳುವಳಿಕೆಯನ್ನು ವೃದ್ಧಿಸುವ ಉದ್ದೇಶಕ್ಕಾಗಿ ಸಾಮಾಜಿಕ ಅಧ್ಯಯನಗಳನ್ನು ಉಪಯೋಗಿಸಿಕೊಳ್ಳುತ್ತದೆ.

ಮೂಲ: ಇರ್ವಿಂಗ್ ಮೊರಿಸ್ಸೆಟ್, Preferred approaches to the teaching of social studies, Social Education, 41 (March 1977): 206-09

**ವಿಭಿನ್ನ ಸಾಮಾಜಿಕ ಅಧ್ಯಯನಗಳ ದೃಷ್ಟಿಕೋನಗಳ ಮೂಲಗಳು**

ಶಿಕ್ಷಣದ ಮೇಲೆ ವ್ಯಾಪಕವಾಗಿ ಪ್ರಭಾವ ಬೀರಿದ ಹಲವು ತತ್ವಶಾಸ್ತ್ರೀಯ ಚಳುವಳಿಗಳಲ್ಲಿ ಬಹಳಷ್ಟು ಸಾಮಾಜಿಕ ಅಧ್ಯಯನಗಳ ಗುರಿಗಳು, ವ್ಯಾಖ್ಯಾನಗಳು, ವರ್ಗೀಕರಣಗಳು, ಸಂಶೋಧನೆ, ಪಠ್ಯಕ್ರಮ, ಮತ್ತು ಬೋಧನ ಕಲೆ,

ಇವೆಲ್ಲವುಗಳ ಮೂಲವನ್ನು, ಭಾಗಶಃ ಅಥವಾ ಸಂಪೂರ್ಣವಾಗಿ, ಗುರುತಿಸಬಹುದು. ಹೆಚ್ಚು ಕಡಿಮೆ ಪ್ರತಿಯೊಬ್ಬ ಅಧ್ಯಾಪಕನ ವರ್ತನೆಯ ಲಕ್ಷಣ, ಸ್ವ-ಪರಿಕಲ್ಪನೆ, ಮತ್ತು ಪಠ್ಯಕ್ರಮದ ಬಗೆಗಿನ ನಿರ್ಧಾರಗಳು ಈ ಒಂದು ಅಥವಾ ಹೆಚ್ಚು ತತ್ವಶಾಸ್ತ್ರೀಯ ಪರಿಕಲ್ಪನೆಗಳನ್ನು ಪ್ರತಿಬಿಂಬಿಸುತ್ತವೆ. ಕೆಲವೊಮ್ಮೆ ಸಂಘರ್ಷದಿಂದ ಕೂಡಿದ್ದು, ಕೆಲವೊಮ್ಮೆ ಒಂದರ ಮೇಲೊಂದು ಪ್ರಸರಿಸಿ, ಹಲವು ಬಾರಿ ಒಂದರಿಂದ ಮತ್ತೊಂದು ವಿಕಸನಗೊಂಡು, ಈ ಪದ್ಧತಿಗಳಲ್ಲಿನ ಕೆಲವು ಶಿಕ್ಷಣ ತಜ್ಞರ ಮೇಲೆ ಸಾರ್ವತ್ರಿಕವಾಗಿ ಪ್ರಭಾವ ಬೀರಿವೆ, ಮತ್ತೆ ಕೆಲವು, ಸಿದ್ಧಾಂತಿಗಳ ಮತ್ತು ಸಂಶೋಧಕರ ಕ್ಷೇತ್ರಗಳಾಗಿ ಉಳಿದುಕೊಂಡಿವೆ. ಸಾಮಾಜಿಕ ಅಧ್ಯಯನಗಳ ಪ್ರಮುಖ ಸಂಘಟನೆಯಾದ ಎನ್.ಸಿ.ಎಸ್.ಎಸ್., ಶಿಕ್ಷಣದ ಹಲವು ಪ್ರತಿಸ್ಪರ್ಧಿ ತಾತ್ವಿಕತೆಗಳನ್ನು ಪ್ರತಿಬಿಂಬಿಸುತ್ತವೆ: ಕೆಲವು ಸದಸ್ಯರು ಪೌರತ್ವವನ್ನು ಪ್ರಧಾನವಾಗಿ ಪ್ರತಿಪಾದಿಸುತ್ತಾರೆ, ಮತ್ತೆ ಕೆಲವರು ಇತಿಹಾಸವು ಪ್ರಧಾನವಾಗಿದೆ ಎಂದು ವಾದಿಸುತ್ತಾರೆ; ಕೆಲವರ ಪ್ರಕಾರ ಸಾಮಾಜಿಕ ಅಧ್ಯಯನಗಳು ಕೇವಲ "ಬೋಧನೆಯ ಸಿದ್ಧಾಂತ." ಮತ್ತೆ ಕೆಲವರಿಗೆ ಇದು ವಾಸ್ತವಿಕ "ಶಿಕ್ಷಣದ ಕಾರ್ಯಕ್ರಮ." ಅಂತಹ ಅಭಿಪ್ರಾಯಗಳು ಸಾಮಾಜಿಕ ಅಧ್ಯಯನಗಳ ಸಿದ್ಧಾಂತದ ಆಲೋಚನೆ ಮತ್ತು ಶಾಲಾಕೊಠಡಿಯ ಚಟುವಟಿಕೆಗಳ ಮೇಲೆ ನೇರವಾದ ಪ್ರಭಾವವನ್ನು ಬೀರಿವೆ.

**ದೀರ್ಘಕಾಲಿಕತೆ ಮತ್ತು ಸಾರಭೂತವಾದ.** ದೀರ್ಘಕಾಲಿಕತೆ ಎನ್ನುವ ಹಣೆಪಟ್ಟಿಯನ್ನು ಕಟ್ಟಿಕೊಂಡ ಪ್ರಾಚೀನ ಪ್ರಭಾವಶಾಲಿ ತತ್ವಶಾಸ್ತ್ರದ ಪ್ರತಿಪಾದಕರು ಮಾನವ ಇತಿಹಾಸದಲ್ಲಿ ಪರಿಪೂರ್ಣ ಮತ್ತು ಬದಲಾಗದ ಸತ್ಯಗಳಿರುತ್ತವೆ ಎಂದು ಪ್ರತಿಪಾದಿಸುತ್ತಾರೆ. ಈ ತತ್ವಕ್ಕೆ ಬದ್ಧವಾಗಿರುವ ಸಾಮಾಜಿಕ ಅಧ್ಯಯನಗಳ ಶಿಕ್ಷಣತಜ್ಞರು ವಿದ್ಯಾರ್ಥಿಗಳು ಈ ಸತ್ಯವನ್ನು ಅರ್ಥಮಾಡಿಕೊಂಡು ತಮ್ಮ ದಿನನಿತ್ಯದ ಬದುಕಿನಲ್ಲಿ ಅದನ್ನು ಅಳವಡಿಸಿಕೊಳ್ಳುವ ಅವಶ್ಯಕತೆಯಿದ್ದು, ಇಂತಹ ಸತ್ಯಗಳನ್ನು ಅಧ್ಯಯನ ಮಾಡುವುದರಿಂದ ತಮ್ಮದೇ ಆದ ಐತಿಹಾಸಿಕ ಸನ್ನಿವೇಶಗಳನ್ನು ಅರಿತು, ಅರ್ಥಮಾಡಿಕೊಂಡು ಇತರರಿಗೆ ಅದನ್ನು ಪ್ರಸರಿಸುವ ಸಕ್ಷಮ, ಸಾಂಸ್ಕೃತಿಕವಾಗಿ ಸಾಕ್ಷರರಾಗಿರುವ ವ್ಯಕ್ತಿಗಳು ಸೃಷ್ಟಿಯಾಗುತ್ತಾರೆ ಎಂದು ನಂಬುತ್ತಾರೆ. ಕೌಶಲ್ಯದ ವಿಕಸನಕ್ಕೆ ಒತ್ತು ಕೊಡುವ ಇತಿಹಾಸದ ಕಲಿಕೆಯನ್ನು ಧೀರ್ಘಕಾಲಿಕಾವಾದಿಗಳು ಬೆಂಬಲಿಸುತ್ತಾರೆ; ಮೊಟಿಮರ್ ಅಡ್ಲರ್‌ನ ಶ್ರೇಷ್ಠ ಕೃತಿಗಳ ಕಾರ್ಯಕ್ರಮದಂತಹ (Great books programme) ಪಾಶ್ಚಾತ್ಯ ನಾಗರೀಕತೆಯ ಅಭಿಜಾತ ಕೃತಿಗಳ ಅಧ್ಯಯನವು ಅವರ ಪಠ್ಯಕ್ರಮದ ಕೇಂದ್ರವಾಗಿರುತ್ತದೆ. ದೀರ್ಘಕಾಲಿಕತಾವಾದಿಗಳ ದೃಷ್ಟಿಕೋನದ ಮನವಿಯನ್ನು- ಕಲ್ಚರಲ್ ಲಿಟರಸಿ ಕೃತಿಯನ್ನೂ ಒಳಗೊಂಡಂತೆ, ಇ.ಡಿ.ಹಿರ್ಶ್‌ರವರ ಅತ್ಯಧಿಕ ಮಾರಾಟವಾಗುವ ಇತರ ಶೈಕ್ಷಣಿಕ ಕೃತಿಗಳ ಜನಪ್ರಿಯತೆಯು ಪುರಸ್ಕರಿಸುತ್ತದೆ. ಈ ಕೆಲವು ಸಿದ್ಧಾಂತಿಗಳ ಪ್ರಕಾರ ಶಾಲಾ ಪಠ್ಯಕ್ರಮವು ಪರಸ್ಪರ ಪೂರಕವಾದ ಎರಡು ಭಾಗಗಳನ್ನು ಹೊಂದಿರಬೇಕು: ಒಂದು ಗಹನವಾದ ಮತ್ತು ಒಂದು ವಿಸ್ತೃತವಾದ ಪಠ್ಯಕ್ರಮ. "ವಿಸ್ತೃತ ಪಠ್ಯಕ್ರಮವು ಪಾರಂಪರಿಕ ಅಕ್ಷರಸ್ಥ ಜ್ಞಾನವಾಗಿರುತ್ತದೆ, ಅಕ್ಷರಸ್ಥ ಅಮೇರಿಕನ್ನರು ಪರಸ್ಪರ ಹಂಚಿಕೊಳ್ಳುವ ಮಾಹಿತಿ, ನಿಲುವುಗಳು, ಮತ್ತು ಊಹೆಗಳು-ಸಾಂಸ್ಕೃತಿಕ ಸಾಕ್ಷರತೆ." ಗಹನವಾದ ಪಠ್ಯಕ್ರಮವು "ವಿಷಯವೊಂದರ ಪರಿಪೂರ್ಣ ವಿಕಸಿತ ಅರ್ಥೈಸುವಿಕೆಯನ್ನು ಪ್ರೋತ್ಸಾಹಿಸುತ್ತದೆ, ಆ ಮೂಲಕ ವ್ಯಕ್ತಿಯ ಜ್ಞಾನವನ್ನು ಏಕೀಕೃತ ಹಾಗೂ ಸುಸಂಬದ್ಧಗೊಳಿಸುತ್ತದೆ." ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸುವ ಸಾಧನವಾಗಿ ಗುಣಮಟ್ಟದ ರಾಷ್ಟ್ರೀಯ ಪಠ್ಯಕ್ರಮದ ಪರವಾಗಿ ವಾದಿಸುತ್ತಾ ಹಿರ್ಶ್ ತನ್ನ ವಾದವನ್ನು ಸಾಮಾನ್ಯ ಗುರಿಗಳು ಮತ್ತು ಪಠ್ಯಕ್ರಮಕ್ಕೆ ವಿಸ್ತರಿಸುತ್ತಾರೆ.

ದೀರ್ಘಕಾಲಿಕತೆಗೆ ನಿಕಟವಾದ ಎರಡನೆಯ ಚಿಂತನಾಕ್ರಮವನ್ನು ಸಾರಭೂತವಾದ ಎಂದು ಕರೆಯಲಾಗುತ್ತದೆ. ಇದರ ಒಬ್ಬ ಪ್ರತಿಪಾದಕ, ವಿಲಿಯಂ ಬೊಗ್ಲೆ ವಿದ್ಯಾರ್ಥಿಗಳಿಗೆ ನಿಜವಾದ ಶಿಕ್ಷಣ ದೊರೆಯಬೇಕಿದ್ದರೆ ಅವರಿಗೆ ಜ್ಞಾನದ ನಿಜವಾದ ಮೂಲತತ್ವ ಅಥವಾ ಸಾರದ ಅರಿವಿರಬೆಕು ಎಂದು ವಾದಿಸುತ್ತಾರೆ. ಮೂಲಭೂತವಾಗಿ ಇತಿಹಾಸ, ಸರಕಾರ, ಮತ್ತು ಅರ್ಥಶಾಸ್ತ್ರಗಳ ಅಧ್ಯಯನದಿಂದ ಮೂಡಿಬಂದ ಪ್ರಬುದ್ಧ ಕೌಶಲ್ಯ, ಪರಿಕಲ್ಪನೆ, ಮತ್ತು ಮೌಲ್ಯಗಳನ್ನು ಅಂತಹ ಸಾರವು ಒಳಗೊಂಡಿರುತ್ತದೆ. ಸಾಮಾನ್ಯವಾಗಿ ಪಾರಂಪರಿಕ ವಿಷಯಗಳ ಅಧ್ಯಯನದಲ್ಲಿ ಅತ್ಯಂತ ಕಠಿಣ ತರಬೇತಿಗೆ ಒತ್ತು ನೀಡುವುದರ ಮೂಲಕ ಸಾರಭೂತವಾದವು ಅಭಿಜಾತತ್ವದ ಛಾಯೆಯನ್ನು ಹೊಂದಿದೆ. “ಸಾರಭೂತ ಪ್ರಶ್ನೆಗಳನ್ನು” ಕೇಳಿ, ಶಿಕ್ಷಣದ ಸಮಸ್ಯೆಯನ್ನು ಬಗೆಹರಿಸುವ ಉದ್ದೇಶದಿಂದ “ಸಾರಭೂತ ಶಾಲೆಗಳ ಸಮ್ಮಿಶ್ರಣ”ದ ಮೂಲಕ ಶಾಲೆಯ ಸುಧಾರಣೆ ಮಾಡಬೇಕೆಂಬ ಚಳುವಳಿಯನ್ನು ನಿರ್ದೇಶಿಸಿದ ಥಿಯೊಡರ್ ಸೈಜರ್ ಸಾರಭೂತವಾದದ ಅತ್ಯಂತ ವ್ಯವಸ್ಥಿತ ಆಧುನಿಕ ಪ್ರತಿಪಾದಕರಾಗಿದ್ದಾರೆ.

ನೀತಿಬೋಧಕ ಕಾಲಾನುಕ್ರಮಿಕ ದೃಷ್ಟಿಕೋನದಿಂದ ಹಿಡಿದು ಚರ್ಚಾಂಶಗಳು ಮತ್ತು ಸಮಸ್ಯೆಗಳಿಗೆ ಹೆಚ್ಚು ಮಾನವೀಯ ಒತ್ತು ನೀಡುವವರೆಗಿನ ಈ ತತ್ವಶಾಸ್ತ್ರೀಯ ನಂಬಿಕೆಗಳಿಂದ ವಿಶಾಲವಾದ ವೈವಿಧ್ಯಮಯ ಅನ್ವಯಗಳು ಮೂಡಿಬರುತ್ತವೆ. ಆದಾಗ್ಯೂ, ಎಲ್ಲಕ್ಕಿಂತ ಹೆಚ್ಚಾಗಿ ದೀರ್ಘಕಾಲಿಕತಾವಾದ ಮತ್ತು ಸಾರಭೂತವಾದಗಳೆರಡಕ್ಕೂ ಸಾಧ್ಯವಾದಷ್ಟೂ ಪರಿಣಾಮಕಾರಿಯಾದ ರೀತಿಯಲ್ಲಿ ಜ್ಞಾನವನ್ನು ಪ್ರಸರಣ ಮಾಡಬೇಕೆಂಬುದರ ಬಗ್ಗೆ ಪ್ರಾಥಮಿಕ ಬದ್ಧತೆ ಇದೆ. ಸಾರಭೂತ ಶಾಲೆಗಳ ಚಳುವಳಿಯು “ಹದಿಹರೆಯದವರು ತಮ್ಮ ಬುದ್ಧಿಯನ್ನು ಉತ್ತಮವಾಗಿ ಉಪಯೋಗಿಸುವುದನ್ನು ಕಲಿಯಲು ಅವರಿಗೆ ನೆರವಾಗುವ ನಿಟ್ಟಿನಲ್ಲಿ ಗಮನ ಹರಿಸುತ್ತದೆ.” ಅಂದರೆ ಕೇವಲ ಬಾಯಿಪಾಠದಿಂದ ನೆನಪಿನಲ್ಲಿಟ್ಟುಕೊಳ್ಳದೆ ಅವರಿಗೆ ಏನು ತಿಳಿದಿದೆಯೊ ಅದನ್ನು ಉಪಯೋಗಿಸುವುದು ಎಂದು ಸೈಜರ್ ತನ್ನ ಇತ್ತೀಚಿನ ಕೃತಿಯಲ್ಲಿ ಸ್ಪಷ್ಟಪಡಿಸುತ್ತಾನೆ. ಮಾಧ್ಯಮಿಕ ಶಾಲೆಗಳ ಸಾಮಾಜಿಕ ಅಧ್ಯಯನಗಳ ಬೋಧಕರು ವಾಸ್ತವಿಕವಾಗಿ ಹೇಗೆ ಕಲಿಸುತ್ತಾರೆ ಎನ್ನುವುದರ ಮೇಲೆ ಇತರ ತತ್ವಶಾಸ್ತ್ರೀಯ ಅನುಯಾಯಿಗಳಿಗಿಂತ ಈ ನಿಲುವಿನ ಪ್ರತಿಪಾದಕರು ಹೆಚ್ಚು ಪರಿಣಾಮ ಬೀರಿದ್ದಾರೆ.

ವೈಜ್ಞಾನಿಕ ಪ್ರಯೋಗವಾದ ಮತ್ತು ನವ ವಿಮರ್ಶೆ. ಸಾಮಾಜಿಕ ಅಧ್ಯಯನಗಳ ಎರಡನೆಯ ದೃಷ್ಟಿಕೋನವನ್ನು ವೈಜ್ಞಾನಿಕ ಶೋಧನೆಯ ತತ್ವಗಳಿಂದ ಪಡೆಯಲಾಗಿದೆ. ಮಾನವರ ಚಿಂತನೆ ಮತ್ತು ವರ್ತನೆಗಳ ನಿಯಮಗಳು, ತತ್ವಗಳು, ಸಿದ್ಧಾಂತಗಳು ಮತ್ತು ನಿಬಂಧನೆಗಳನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ಸಮಾಜ ವಿಜ್ಞಾನಿಗಳು ವೈಜ್ಞಾನಿಕ ವಿಧಾನದ ಕಾರ್ಯತಂತ್ರ ಮತ್ತು ಉಪಕರಣಗಳನ್ನು ರೂಪಿಸಿದ್ದಾರೆ. ಈ “ಪ್ರಯೋಗಶೀಲರು” ಜನರನ್ನು ವ್ಯಕ್ತಿ, ಸಮೂಹ, ಅಥವಾ ವಿಭಿನ್ನ ಸಂಸ್ಕೃತಿಗಳ ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಮಾಧ್ಯಮಿಕ ಶಾಲೆಗಳಲ್ಲಿ ಪ್ರಯೋಗ, ಸಮೀಕ್ಷೆಯಾಧಾರಿತ ಸಂಶೋಧನೆಗಳು, ನಿರ್ದಿಷ್ಟ ವಿಷಯದ ಅಧ್ಯಯನಗಳು ಮತ್ತು ಇಂತಹ ಇತರ ವಿಶ್ಲೇಷಣಾತ್ಮಕ ಸಾಧನಗಳನ್ನು ಆಧರಿಸಿದ ಪ್ರಾಜೆಕ್ಟ್‌ಗಳನ್ನು ಸೃಜಿಸಿ, ವಿದ್ಯಾರ್ಥಿಗಳನ್ನು ವೈಜ್ಞಾನಿಕ ವಿಧಾನದಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವ ಮೂಲಕ ಶಿಕ್ಷಣ ತಜ್ಞರು ತಮ್ಮ ವಿಧಾನಗಳನ್ನು ಅನುಕರಿಸಲು ಬಯಸುತ್ತಾರೆ. ವಿದ್ಯಾರ್ಥಿಗಳು ನಿಸ್ಸಂದೇಹ ಸತ್ಯದ ದೃಷ್ಟಿಕೋನದ ನಿಟ್ಟಿನಲ್ಲಿ ಯೋಚಿಸದೆ ಸಂಭಾವ್ಯತೆಯ ದೃಷ್ಟಿಯಿಂದ ಯೋಚಿಸುವಂತೆ ಅವರನ್ನು ಪ್ರೋತ್ಸಾಹಿಸಲಾಗುತ್ತದೆ. ದೊರೆತ ಸಾಕ್ಷ್ಯವನ್ನು ವ್ಯಾಖ್ಯಾನಿಸಲು ಅವರಿಗೆ ವಿವಿಧ ಆಧಾರ ಚೌಕಟ್ಟುಗಳನ್ನು ನೀಡಲಾಗುತ್ತದೆ, ಮತ್ತು ತೀರ್ಮಾನವನ್ನು ಕೈಗೊಳ್ಳುವಾಗ ನ್ಯಾಯಯುತವಾಗಿ, ವಸ್ತುನಿಷ್ಠವಾಗಿ, ಮತ್ತು ನಿಷ್ಪಕ್ಷಪಾತವಾಗಿರುವಂತೆ ಅವರನ್ನು ಹುರಿದುಂಬಿಸಲಾಗುತ್ತದೆ. 1950, 1960 ಮತ್ತು

1970ರ ದಶಕದ ಪ್ರಾರಂಭದಲ್ಲಿ ಸಮಾಜ ವಿಜ್ಞಾನಗಳಲ್ಲಿ ಸುಸ್ಥಿರ ನೆಲೆಯ ದತ್ತಾಂಶಗಳ ಈ ಹುಡುಕಾಟದ ಉತ್ಸಾಹವು ವ್ಯಾಪಕವಾಗಿತ್ತು.

ಆದರೆ, 1970ರ ದಶಕದ ಕೊನೆಯ ಭಾಗದಲ್ಲಿ ವೈಜ್ಞಾನಿಕ ವಿಧಾನದ ಮೂಲಕ ಸಮಾಜ ವಿಜ್ಞಾನಗಳನ್ನು ವ್ಯಾಖ್ಯಾನಿಸುವುದಕ್ಕೆ, ವಿಶೇಷವಾಗಿ ತೀರ್ಮಾನಗಳು ಮತ್ತು ಸಿದ್ಧಾಂತಗಳನ್ನು ಸಂಪೂರ್ಣವಾಗಿ ಮೌಲ್ಯಮುಕ್ತಗೊಳಿಸಬಹುದು ಎನ್ನುವ ಪರಿಕಲ್ಪನೆಗೆ ಭಾರಿ ವಿರೋಧ ವ್ಯಕ್ತವಾಯಿತು. ಜುರ್ಗೆನ್ ಹೆಬರ್ಮ್ಯಾಸ್ ಮತ್ತು ಥಾಮಸ್ ಕ್ಹುನ್‌ರ ತೀವ್ರ ಪ್ರಭಾವಕ್ಕೊಳಗಾಗಿದ್ದ ಹಲವು ಸಮಾಜ ವಿಜ್ಞಾನಿಗಳು "ನವ ವಿಮರ್ಶೆ"ಯತ್ತ ತಿರುಗಿದರು. ಕೆಲವು ಬಾರಿ ವಿದ್ಯಮಾನಶಾಸ್ತ್ರ (phenomenology) ಅಥವಾ ವಿಮರ್ಶಾ ಸಿದ್ಧಾಂತವೆಂದು ಕರೆಯಲಾಗುವ ಈ ಚಿಂತನೆಗಳು ವಸ್ತುನಿಷ್ಠತೆಯ ಪರಿಕಲ್ಪನೆಯನ್ನು ಸಂಪೂರ್ಣವಾಗಿ ಇಲ್ಲವೆ ಭಾಗಶಃ ಕೈಬಿಟ್ಟವು, ಮತ್ತು ವಿಜ್ಞಾನವು ಎಂದಿಗೂ ಮೌಲ್ಯಗಳ ಪ್ರತಿಪಾದನೆಯಿಂದ ಮುಕ್ತವಾಗುವುದು ಸಾಧ್ಯವಿಲ್ಲ ಮತ್ತು ಮುಕ್ತವಾಗಲೂ ಬಾರದು ಎಂದು ಸೂಚಿಸಿದರು. ಸಾಮಾಜಿಕ ಅಧ್ಯಯನಗಳ ವಿಮರ್ಶಕರು ಪ್ರಯೋಗಶೀಲವಾದಿಗಳ ಹಲವು ತೀರ್ಮಾನಗಳ ಬಗ್ಗೆ ಮಾತ್ರವಲ್ಲ ಸಂಶೋಧನಾ ವಿನ್ಯಾಸಗಳು ಮತ್ತು ವಿಧಾನಗಳ ಕುರಿತೂ ಸಹ ತಮ್ಮ ಗಹನವಾದ ಸಂದೇಹವನ್ನು ವ್ಯಕ್ತಪಡಿಸಿದರು. ಮೌಲ್ಯಗಳು ಮಾನವನ ಎಲ್ಲ ಶೋಧನೆಗೂ ತಳಹದಿಯಾಗಿರುತ್ತವೆ ಮತ್ತು ಅಂತಹ ಮೌಲ್ಯಗಳನ್ನು ಪರೀಕ್ಷಿಸುವುದು ಮತ್ತು ಮಾಡಲಾದ ಊಹೆಗಳನ್ನು ಸ್ಪಷ್ಟಪಡಿಸಬೇಕಾದುದು ಒಂದು ಅರ್ಥಪೂರ್ಣ ಸಂವಾದಕ್ಕೆ ಅಗತ್ಯ ಎಂದು ಅವರು ವಾದಿಸಿದರು. ರಿಚರ್ಡ್ ಬರ್ನ್‌ಸ್ಟಿನ್ ಹೇಳಿದ ಹಾಗೆ:

ಪ್ರತಿಪಾದಿಸಲಾದ ಪ್ರಯೋಗಾಧಾರಿತ ಸಿದ್ಧಾಂತಗಳನ್ನು ನಾವು ಪರೀಕ್ಷಿಸಿದಾಗ, ಅವು ಮೌಲ್ಯ-ತಟಸ್ಥವಾಗಿಲ್ಲ , ಆದರೆ ಗಹನವಾದ ವೈಚಾರಿಕ ಪೂರ್ವಗ್ರಹಗಳನ್ನು ಮತ್ತು ಅಂತರ್ನಿಹಿತ ವಿವಾದಾತ್ಮಕ ಮೌಲ್ಯಗಳ ನಿಲುವನ್ನು ಪ್ರತಿಬಿಂಬಿಸುತ್ತವೆ ಎನ್ನುವುದು ನಮಗೆ ಮತ್ತೆ ಮತ್ತೆ ಗೋಚರವಾಗುತ್ತದೆ. ಈ ಸಿದ್ಧಾಂತಗಳಲ್ಲಿರುವ ವಿವರಣಾತ್ಮಕ ಮತ್ತು ಮೌಲ್ಯಾಂಕನಾತ್ಮಕ ಘಟಕಗಳನ್ನು ಸ್ಪಷ್ಟವಾಗಿ ಬೇರ್ಪಡಿಸಬಹುದು ಎಂದು ಯೋಚಿಸುವುದು ಕಲ್ಪನೆಯಾಗುತ್ತದೆ, ಏಕೆಂದರೆ ಇಂಗಿತದ ಮೌಲ್ಯಾಂಕನಗಳು ಅವುಗಳ ಚೌಕಟ್ಟಿನ ಅಂತರ್ನಿಹಿತ ಭಾಗವೇ ಆಗಿರುತ್ತವೆ.

ಕಳೆದ ಶತಮಾನದ ಮಧ್ಯ ಭಾಗದ ದಶಕಗಳಲ್ಲಿ ಸಾಮಾಜಿಕ ಅಧ್ಯಯನಗಳ ಪಠ್ಯಕ್ರಮದ ವಿಷಯವಸ್ತು ಮತ್ತು ವಿಧಾನವನ್ನು ವೈಜ್ಞಾನಿಕ ಪ್ರಯೋಗಶೀಲವಾದವು ಸಾಕಷ್ಟು ಪ್ರಭಾವಿಸಿತು. ನವ ವಿಮರ್ಶೆಯ ಪ್ರಭಾವ ಕಡಿಮೆ ಇತ್ತು. ಆದರೆ ವಿದ್ಯಾರ್ಥಿಗಳ ಕ್ರಿಯಾಶೀಲತೆಯನ್ನು ಮತ್ತು ನಿರ್ಧಾರ ಕೈಗೊಳ್ಳುವಿಕೆಯನ್ನು ಪ್ರೋತ್ಸಾಹಿಸಲು ಬಯಸಿದ ಶಿಕ್ಷಣ ತಜ್ಞರು ಮತ್ತು ಆಡಳಿತಗಾರರ ಮೇಲೆ ಇದರ ಪರಿಣಾಮ ಗಣನೀಯವಾಗಿತ್ತು. ನೀತಿ ಮತ್ತು ಮೌಲ್ಯ ಪ್ರತಿಪಾದನೆಗಳ ಕುರಿತ ತಿಳುವಳಿಕೆ ಮತ್ತು ಅವುಗಳನ್ನು ಪರೀಕ್ಷಿಸುವ ಇಚ್ಚೆಯು ಸಾಮಾಜಿಕ ಅಧ್ಯಯನಗಳ ಶಿಕ್ಷಣದ ಮೂಲಭೂತ ಅಂಶಗಳಾಗಿರಬೇಕು ಎನ್ನುವುದನ್ನು ಪ್ರತಿಪಾದಕರು ಸೂಚಿಸಿದರು.

**ವ್ಯಾವಹಾರಿಕತೆ ಮತ್ತು ಪ್ರಗತಿಪರವಾದ**. ಆಚರಣೀಯವಾದವೆನ್ನುವ ಈ ಪದಗುಚ್ಚವನ್ನು ಖ್ಯಾತ ಶಿಕ್ಷಣ ತತ್ವಶಾಸ್ತ್ರಜ್ಞನಾದ ಜಾನ್ ಡ್ಯೂಯಿ ಅವರ ಬರಹಗಳಿಗೆ, ಮತ್ತು ಪ್ರತಿನಿತ್ಯದ ಬದುಕಿಗೆ ಅಳವಡಿಕೆಯಾಗುವ ಹಾಗೆ, ವಿದ್ಯಾರ್ಥಿಗಳ ವಿವೇಚನೆ ಮತ್ತು ತೀರ್ಮಾನಗಳ ವಿಕಸನಕ್ಕೆ ವಿಶೇಷವಾಗಿ ಮಹತ್ವ ನೀಡುವ ಇತರ ಶೈಕ್ಷಣಿಕ "ಪ್ರಗತಿಪರ" ಚಿಂತನೆಯೊಂದಿಗೆ ತಳುಕು ಹಾಕಲಾಗಿದೆ. ಈ ತಾತ್ವಿಕತೆಯೊಂದಿಗೆ ಸೇರಿಕೊಂಡಿರುವ ಇತರ ಪದಗುಚ್ಚಗಳೆಂದರೆ: ಸಮಸ್ಯೆಯ ಬಗೆಹರಿಸುವಿಕೆ, ಸಮಸ್ಯೆಯ ಶೋಧನೆ, ವಿವೇಚನೆ, ಚಿಂತನಶೀಲ ಆಲೋಚನೆ,

ವಿಚಾರಣೆ, ವಿಮರ್ಶಾತ್ಮಕ ಚಿಂತನೆ, ಮತ್ತು ಸೃಜನಶೀಲ ಚಿಂತನೆ. ಶಾಲೆಗಳು, ಸಮುದಾಯ, ಮತ್ತು ವಿದ್ಯಾರ್ಥಿ ಅನುಭವಗಳ ನಡುವೆ ಸಂಪರ್ಕವನ್ನು ಬೆಳೆಸುವುದರ ಮಹತ್ವವನ್ನು ಡ್ಯೂಯಿ ಒತ್ತಿ ಹೇಳುತ್ತಾರೆ:

ಸಾಕ್ಷ್ಯಾಧಾರಗಳ ಮತ್ತು ಅನುಗಮನ ಮತ್ತು/ಅಥವಾ ಅನುಮಾನಾತ್ಮಕ ತರ್ಕದ ಮೇಲೆ ಆಧಾರಿತವಾಗಿದ್ದು, ನಿರ್ಣಯಗಳಾಗಿ ಕೊನೆಗೊಳ್ಳುವ ಚಿಂತನೆಗಳ ಪ್ರಕ್ರಿಯೆಯ ಮೂಲಕ ಸಂಬಂಧಗಳನ್ನು ಗುರುತಿಸಲಾಗುತ್ತದೆ, ಚಿಂತನೆಗಳನ್ನು ವಿಶ್ಲೇಷಿಸಲಾಗುತ್ತದೆ, ಮತ್ತು ನಿರ್ಣಯಗಳನ್ನು ಕೈಗೊಳ್ಳಲಾಗುತ್ತದೆ, ಮತ್ತು ಇವೆಲ್ಲವೂ ತೀರ್ಮಾನಗಳಾಗಿ ಪರ್ಯಾವಸಾನಗೊಳ್ಳುತ್ತವೆ. ತೆಗೆದುಕೊಂಡ ತೀರ್ಮಾನಗಳು ಮತ್ತು ನಿರ್ಣಯಗಳು ಆಗ ಸಂಭವತಃ ಸಾಮಾಜಿಕ ಬದ್ಧತೆಗಳಿಗೆ, ರಾಜಕೀಯ ನಿರ್ಣಯಗಳಿಗೆ, ಮತ್ತು ವೈಯಕ್ತಿಕ ಬೆಳವಣಿಗೆಗಳ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಲು ಹಾದಿ ಮಾಡಿಕೊಡುತ್ತವೆ ಎಂದು ಊಹಿಸಬಹುದು.

ದೀರ್ಘಕಾಲವಾದಿಗಳು ವಿಷಯವಸ್ತುಗಳಲ್ಲಿ ಅಸಕ್ತಿ ಹೊಂದಿದರೆ, ವ್ಯಾವಹಾರಿಕ ಮತ್ತು ಪ್ರಗತಿಪರವಾದಿಗಳು ಪ್ರಕ್ರಿಯೆಗೆ ಮಹತ್ವ ನೀಡುತ್ತಾರೆ. ಪಠ್ಯಕ್ರಮವನ್ನು ಅವರು ಸಾರ್ವತ್ರಿಕ ಅಥವಾ ಸನಾತನ ಚಿಂತನೆಗಳ ಸಂಕ್ಷಿಪ್ತ ಪಟ್ಟಿಯಂತೆ ನೋಡದೆ ಹೊಸ ಚಿಂತನೆಗಳನ್ನು ಒಳಗೊಳ್ಳುವ ಮುಕ್ತ ಮತ್ತು ನಮ್ಯವೆಂಬಂತೆ ನೋಡುತ್ತಾರೆ. ನಿರೀಕ್ಷೆಯಂತೆ ಪ್ರಗತಿಪರರು ಸಾಮಾಜಿಕ ಅಧ್ಯಯನಗಳ ಶಾಲಾ ಕೊಠಡಿಗಳಲ್ಲಿ ವಿಮರ್ಶಾತ್ಮಕ ಚಿಂತನೆಗಳನ್ನು ಮತ್ತು ನಿರ್ಣಯ ಕೈಗೊಳ್ಳುವ ಕೌಶಲದ ಸೃಜನೆಯನ್ನು ಪ್ರತಿಪಾದಿಸುತ್ತಾರೆ. ಪ್ರಗತಿಪರ ಸಾಮಾಜಿಕ ಅಧ್ಯಯನಗಳಿಂದ ಹೊರಬಂದವನು ಒಬ್ಬ ಜಾಣ ಬಳಕೆದಾರ, ಬುದ್ಧಿವಂತ ಮತ್ತು ಉತ್ತಮ ತಿಳುವಳಿಕೆಯುಳ್ಳ ಮತದಾರ, ಸಮುದಾಯದ ಬದುಕಿನಲ್ಲಿ ಕ್ರಿಯಾಶೀಲ ಭಾಗೀದಾರ, ಮತ್ತು ಜೀವಮಾನವಿಡೀ ಹೊಸ ಚಿಂತನೆಗಳನ್ನು ಹೊಸ ಕೌಶಲಗಳನ್ನು ಹುಡುಕುವಂತಹವನಾಗಿರುತ್ತಾನೆ.

ಕನಿಷ್ಠ ಪಕ್ಷ ಡ್ಯೂಯಿಯ ತತ್ವಗಳ ಕೆಲವು ಭಾಗಗಳಿಂದ ಮೂಡಿದ ಮತ್ತೊಂದು ಮಹತ್ವದ ಚಳುವಳಿಯಾದ ನೈತಿಕ ಮಾನವೀಯತೆ ಅಥವಾ ಮೌಲ್ಯ ಸ್ಪಷ್ಟೀಕರಣವು ಪ್ರಮುಖವಾಗಿ ವಿದ್ಯಾರ್ಥಿಗಳ ವೈಯಕ್ತಿಕ ಬೆಳವಣಿಗೆಯನ್ನು ಪೋಷಿಸುವ ವಾಹಕವಾಗಿ ಸಾಮಾಜಿಕ ಅಧ್ಯಯನಗಳ ಶಿಕ್ಷಣವನ್ನು ಗ್ರಹಿಸುತ್ತದೆ. ಇತ್ತೀಚಿನ ದಶಕಗಳಲ್ಲಿ ಇದೊಂದು ಜನಪ್ರಿಯ ದೃಷ್ಟಿಕೋನವಾಗಿದೆ; ಸ್ವ-ಯಥಾರ್ಥೀಕರಣ, ಸ್ವ-ಸಾರ್ಥಕತೆ, ಮತ್ತು ಅಸ್ಮಿತೆ - ಇವು ಇದರೊಂದಿಗೆ ತಳಕು ಹಾಕಿಕೊಂಡಿರುವ ಪದಗುಚ್ಛಗಳು. ಅಲ್ಪಸಂಖ್ಯಾತ ಮತ್ತು ಅನನುಕೂಲಕ್ಕೊಳಗಾದ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸದಿಂದ ಪ್ರಬಲ ಸಂಸ್ಕೃತಿಯೆಡೆಗೆ ಹೋಗಲು ಅವರದೇ ಆದ ಮೌಲ್ಯಗಳು ಮತ್ತು ಅಸ್ಮಿತೆಗಳಿಂದ ಬಲವರ್ಧಿತರಾಗುವ ಅಗತ್ಯವಿರುತ್ತದೆ ಎನ್ನುವಂತೆ ಅವರನ್ನು ನೋಡಲಾಗುತ್ತದೆ ಎನ್ನುವ ಕಾರಣದಿಂದ ಹಲವು ಬಾರಿ ಬಹುಸಂಸ್ಕೃತಿವಾದವು ತಾತ್ವಿಕ ನೆಲೆಯಿಂದ ಸ್ಫೂರ್ತಿ ಪಡೆಯುತ್ತದೆ. "ನಡವಳಿಕೆಯ ಶಿಕ್ಷಣ"ದ ಕುರಿತ ಇತ್ತೀಚಿನ ಕೆಲವು ಕೃತಿಗಳೂ ಕೂಡ ಡ್ಯೂಯಿ ಮತ್ತು ಸಾರಭೂತವಾದಿಗಳಿಂದ ಸ್ಫೂರ್ತಿ ಪಡೆದಿವೆ. ಬೆಂಬಲಿಗರು ಇದನ್ನು ಕ್ರಿಯಾಶೀಲ ಪೌರರನ್ನು ಸೃಷ್ಟಿಸಲು ಬಯಸುತ್ತದೆ ಎಂದು ಹೊಗಳಿದರೆ ಟೀಕಾಕಾರರು ಉತ್ತಮವಾಗಿ ಹೊಂದಾಣಿಕೆ ಮಾಡಿಕೊಳ್ಳುವ ಅನುರೂಪತೆಯನ್ನು ವಿಕಸಿತಗೊಳಿಸುವ ಸಾಧನವೆಂಬುದಾಗಿ ಗ್ರಹಿಸುತ್ತಾರೆ.

**ಪುನರ್ರಚನಾವಾದ ಮತ್ತು ಸಾರ್ವಜನಿಕ ಚರ್ಚಾಂಶಗಳು**. ಪಶ್ಚಿಮದ ಪರಂಪರೆಯಲ್ಲಿ ಸಾಮಾಜಿಕ ನ್ಯಾಯ ಎನ್ನುವುದು ಒಂದು ಅನುಕರಣೀಯ ಮೌಲ್ಯವಾಗಿದೆ. ಯಾರಿಗೆ ಸಾಮಾಜಿಕ ನ್ಯಾಯ ಪ್ರಮುಖ ಗುರಿಯಾಗಿದೆಯೊ ಅವರಿಗೆ ಸಾಮಾಜಿಕ ಅಧ್ಯಯನಗಳ ಶಿಕ್ಷಣವು ವಿದ್ಯಾರ್ಥಿಗಳಿಗೆ ಸಮುದಾಯ, ರಾಷ್ಟ್ರ, ಮತ್ತು ವಿಶ್ವದ ವ್ಯವಹಾರಗಳಲ್ಲಿ ಪಾತ್ರ ವಹಿಸುವುದನ್ನು ಮತ್ತು ನೈತಿಕ ದೋಷಗಳ, ರಾಜಕೀಯ ಕುತಂತ್ರಗಳ, ಮತ್ತು ಆರ್ಥಿಕ

ಲಾಭಕ್ಕಾಗಿ ಭೂಮಿಯನ್ನು ನಾಶಪಡಿಸುವುದರ ವಿರುದ್ಧ ಧ್ವನಿ ಎತ್ತುವಂತೆ ಪ್ರೋತ್ಸಾಹಿಸುತ್ತದೆ, ಈ ತತ್ವಕ್ಕೆ "ಪುನರ್ರಚನಾವಾದ" ಎಂದು ನಾಮಕರಣ ಮಾಡಿದ ಜಾರ್ಜ್ ಎಸ್. ಕೌಂಟ್ಸ್ ಸಮಾಜವನ್ನು ಪುನರ್ರಚಿಸುವಲ್ಲಿ ಅಥವಾ ಬದಲಾವಣೆ ಮಾಡುವಲ್ಲಿ ಶಾಲೆಗಳು ಪಾತ್ರವನ್ನು ವಹಿಸಬೇಕು ಎಂದು ವಾದಿಸುತ್ತಾನೆ. ಕಾಂಟ್ಸ್‌ನ ಕೃತಿಯನ್ನು ಹಲವರು ಉತ್ಸಾಹದಿಂದ ಅಳವಡಿಸಿಕೊಂಡಿದ್ದಾರೆ. ಅದರಲ್ಲಿ ಕೆಲವರಿಗೆ ಶಾಲೆಗಳು ಕೇವಲ ವಿವಾದಾತ್ಮಕ ವಿಷಯಗಳ ಚರ್ಚೆಗೆ ವೇದಿಕೆಗಳಲ್ಲ, ಅವು ಸಾಮಾಜಿಕ ಕ್ರಿಯಾಶೀಲತೆಯ ಯೋಜನೆಗಳಲ್ಲಿನ ಭಾಗವಹಿಸುವಿಕೆಯನ್ನೂ ಒಳಗೊಂಡಿರುತ್ತವೆ. ಸಾಮಾಜಿಕ ಅನ್ಯಾಯವು ಭಾಗಶಃ ಕೌಶಲ, ಜ್ಞಾನ, ಮತ್ತು ಶಾಲೆಗಳಲ್ಲಿನ ಸಂಪನ್ಮೂಲಗಳ ಅಸಮಾನ ವಿತರಣೆಯಿಂದ ಹುಟ್ಟಿಕೊಳ್ಳುತ್ತದೆ ಎನ್ನುವ ವಾದಗಳನ್ನಾಧರಿಸಿ ಮೈಕೆಲ್ ಆಪಲ್, ಹೆನ್ರಿ ಗಿರಾಕ್ಸ್, ಪೀಟರ್ ಮ್ಯಾಕ್‌ಲಾರೆನ್, ಮತ್ತು ಜೋಯೆಲ್ ಸ್ಪ್ರಿಂಗ್‌ರಂತಹ ವಿದ್ವಾಂಸರುಗಳಿಂದ ವಿಕಸಿತಗೊಂಡ ವಿಮರ್ಶಾತ್ಮಕ ಶಿಕ್ಷಣಶಾಸ್ತ್ರವು ಶಾಲಾಕಲಿಕೆ ಮತ್ತು ಸಮಾಜದ ನಡುವಿನ ಸಂಬಂಧದ ವಿಸ್ತೃತ ವಿಶ್ಲೇಷಣೆಯನ್ನು ನೀಡುತ್ತದೆ.

1930ರ ದಶಕದಲ್ಲಿ ಮತ್ತೆ ಪುನಃ 1960 ಮತ್ತು 1970ರ ದಶಕಗಳಲ್ಲಿ ಪುನರ್ರಚನಾವಾದವು ಸಾಮಾಜಿಕ ಅಧ್ಯಯನಗಳ ಶಿಕ್ಷಣದ ಮೇಲೆ ವ್ಯಾಪಕವಾದ ಪರಿಣಾಮವನ್ನು ಬೀರಿತು. ಸಮಕಾಲೀನ ಘಟನೆಗಳು, ಅಣಕು ಪ್ರಯೋಗಗಳು, ಚರ್ಚೆಗಳು, ಮತ್ತು ಪ್ರತ್ಯನುಕರಣೆ ಮತ್ತು ಸಮಾನತೆ, ಅರ್ಥಿಕತೆಯಲ್ಲಿ ಸರಕು ಸಾಮಗ್ರಿಗಳ ಸೇವೆಗಳ ವಿತರಣೆ, ವಿದೇಶ ನೀತಿ, ಅಂತಾರಾಷ್ಟ್ರೀಯ ಶಾಂತಿ ಮತ್ತು ಕ್ಷಾಮ, ಓಝೋನ್ ರಂಧ್ರಗಳು, ಹಸಿಭೂಮಿಯ ನಾಶ, ವಾಯು ಮತ್ತು ನೀರಿನ ಮಾಲಿನ್ಯದಂತಹ ಪರಿಸರದ ವಿಷಯಗಳ ಕುರಿತು ಪ್ರಶ್ನಿಸುವುದಕ್ಕೆ ಮಹತ್ವ ನೀಡುವ ಪಠ್ಯಕ್ರಮವು ಇದನ್ನು ಪ್ರತಿಬಿಂಬಿಸುತ್ತದೆ. ಸಾರ್ವಜನಿಕ ಚರ್ಚಾಂಶಗಳ ಪಠ್ಯಕ್ರಮವು ಸಮಕಾಲೀನ ಮತ್ತು ನಿರಂತರ ಸಮಸ್ಯೆಗಳ ಕುರಿತು ಪ್ರಮುಖ ಕಾಳಜಿಯನ್ನು ಹೊಂದಿದೆ ಮತ್ತು ಹೆಚ್ಚು ಕಡಿಮೆ ಇದು ಅಚಾರಿತ್ರಿಕವಾಗಿದೆ.

ವಿಮರ್ಶಾತ್ಮಕ ಚಿಂತನೆ ಮತ್ತು ನಿರ್ಣಯ ಕೈಗೊಳ್ಳುವಿಕೆಗೆ ಸಂಬಂಧಿಸಿದಂತೆ ಪುನರ್ರಚನಾವಾದಿಗಳು ವ್ಯಾವಹಾರಿಕ ಜನರೊಂದಿಗೆ ಸಹಮತವನ್ನು ಹೊಂದಿದ್ದು, ಇದಕ್ಕೆ ಬದ್ಧರಾಗಿರುವವರು ವಿದ್ಯಾರ್ಥಿಗಳು ಕ್ರಿಯೆಯಲ್ಲಿ ಯಾವುದನ್ನು ಎತ್ತಿಹಿಡಿಯುತ್ತಾರೆ ಎಂದು ನಿರ್ಧರಿಸಲು ಅವರದೇ ಆದ ನಂಬಿಕೆಗಳನ್ನು ಪರೀಕ್ಷಿಸುವುದನ್ನು ಕಲಿಸುತ್ತಾರೆ; ಇತರರು ಮುಚ್ಚುಮರೆಯಿಲ್ಲದೆ ತಮ್ಮದೇ ಆದ ಮೌಲ್ಯಗಳನ್ನು ವಿದ್ಯಾರ್ಥಿಗಳ ತಲೆಗೆ ತುಂಬುತ್ತಾರೆ. ಇವೆರಡಕ್ಕೂ ಭಾಗವಹಿಸುವಿಕೆಯೇ ಪ್ರಮುಖ ಗುರಿಯಾಗಿದೆ.

### ನಿಮ್ಮ ಆಲೋಚನೆಯೇನು?

ಅಧ್ಯಾಪನ ವೃತ್ತಿಗೆ ಯಾವ ತತ್ತ್ವ ಅಥವಾ ಪರಂಪರೆಗಳು ಹೆಚ್ಚು ಸೂಕ್ತವೆನಿಸುತ್ತದೆ? ನಿಮ್ಮ ಆಯ್ಕೆಗಳಿಗೆ ಇರುವ ಕಾರಣಗಳೇನು?

ನೀವು ಒಬ್ಬ ಬೋಧಕರಾಗಿ ನಿಮ್ಮ ಕ್ಷೇತ್ರವನ್ನು ಅರ್ಥಮಾಡಿಕೊಳ್ಳಲು ಆಶಿಸಿದಲ್ಲಿ, ಮೊದಲನೆಯದಾಗಿ, ಶಾಲಾ ಕೊಠಡಿಯ ದೈನಂದಿನ ರೂಢಿಗಳು ಮತ್ತು ಎರಡನೆಯದಾಗಿ, ವೈಚಾರಿಕ ಗುರಿಗಳು, ಚರ್ಚೆ, ಮತ್ತು ಸಂಶೋದನೆ - ಈ ಎರಡೂ ಜಗತ್ತುಗಳನ್ನು ಸದಾಕಾಲ ನಿಮ್ಮ ಮನದಲ್ಲಿಟ್ಟುಕೊಳ್ಳಬೇಕು. ವಿವಿಧ ತತ್ವಶಾಸ್ತ್ರೀಯ ಚಿಂತನಕ್ರಮಗಳ ಪ್ರತಿನಿಧಿಗಳು ತೀವ್ರವಾಗಿ ಸೈದ್ಧಾಂತಿಕ ಚರ್ಚೆಯಲ್ಲಿ ತೊಡಗಿಕೊಂಡಿರುತ್ತಾರಾದರೂ, ಅನಿವಾರ್ಯ ವಿಷಯವಸ್ತು,

ಪಠ್ಯಕ್ರಮದ ಕ್ರಮಾನುಗತಿ, ಪರೀಕ್ಷಿಸುವಿಕೆ, ವಿಷಯವಸ್ತು, ಮತ್ತು ವಿದ್ಯಾರ್ಥಿಗಳ ವ್ಯಕ್ತಿತ್ವ ಶಾಲಾಕೊಠಡಿಯ ವಾಸ್ತವಿಕ ಕಾಳಜಿಗಳಾಗಿರುತ್ತವೆ. ಅದೇ ಸಮಯದಲ್ಲಿ, ಒಳ್ಳೆಯದಕ್ಕೊ, ಕೆಟ್ಟದ್ದಕ್ಕೊ, ಶಾಲಾಕೊಠಡಿಯ ರೂಢಿಗಳು ಮಾತ್ರ ದಶಕದಿಂದ ದಶಕಕ್ಕೆ ಸ್ಥಿರವಾಗಿಯೆ ಮುಂದುವರೆಯುತ್ತಿವೆ.

ಸಂಶೋಧನಾ ವರದಿ

300ಕ್ಕೂ ಹೆಚ್ಚು ಕಿರಿಯ ಪ್ರೌಢಶಾಲೆಗಳ ಮತ್ತು 500ಕ್ಕೂ ಹೆಚ್ಚು ಹಿರಿಯ ಪ್ರೌಢಶಾಲೆಗಳ ಶಾಲಾಕೊಠಡಿಗಳ ಅಧ್ಯಯನವನ್ನು ಆಧರಿಸಿ ಜಾನ್ ಗುಡ್‌ಲ್ಯಾಡ್ ಅವರು ಕಂಡುಕೊಂಡ ಪ್ರಕಾರ ಒಟ್ಟಾರೆಯಾಗಿ, ಬೋಧನೆಯನ್ನು - ಸಾಮಾಜಿಕ ಆಧ್ಯಯನಗಳನ್ನೂ ಒಳಗೊಂಡು, ಆಧುನಿಕ ಪ್ರಜಾಪ್ರಭುತ್ವ ಮಾದರಿಯ ಚರ್ಚೆಯ ಬದಲಾಗಿ ಹಳೆಯ ಕಾಲದ ಪಠಣದ ಶೈಲಿಯಲ್ಲಿ ಮಾಹಿತಿಯನ್ನು ವಸ್ತುಸ್ಥಿತಿಯ ನಿಟ್ಟಿನಲ್ಲಿ ಪ್ರಸ್ತುತಪಡಿಸಲು ಸಿದ್ಧಪಡಿಸಲಾಗಿದೆ. ಅವರು ಹೀಗೆ ನಿಷ್ಕರ್ಷಿಸುತ್ತಾರೆ:

ನಮ್ಮ ಮಾದರಿಯಲ್ಲಿದ್ದ (sample) ಶಾಲೆಗಳು ಸಾಮಾನ್ಯವಾಗಿ “ಬೌದ್ಧಿಕ ಬೆಳವಣಿಗೆ” ಎಂದು ಪಟ್ಟಿ ಮಾಡಿರುವ ಆ ಎಲ್ಲಾ ಸಾಮರ್ಥ್ಯಗಳನ್ನು, ಅಂದರೆ, - ವಿವೇಚನೆಯಿಂದ ಆಲೋಚಿಸುವ ಸಾಮರ್ಥ್ಯ, ಜ್ಞಾನದ ಮೌಲ್ಯಮಾಪನ ಮತ್ತು ಬಳಕೆ, ಬೌದ್ಧಿಕ ಕುತೂಹಲ, ಮತ್ತು ಮತ್ತಷ್ಟು ಕಲಿಯುವ ಬಯಕೆಗಳನ್ನು ವಿಕಸಿತಗೊಳಿಸುತ್ತಿರುವ ಕೆಲಸದಲ್ಲಿ ತೊಡಗಿರುವಂತೆ ಕಾಣಿಸುತ್ತಿರಲಿಲ್ಲ. ಕೆಲವೇ ಕೆಲವು ಅಪರೂಪದ ಸಂದರ್ಭದಲ್ಲಿ ಮಾತ್ರ ಬೋಧನೆಯು ಕೇವಲ ಮಾಹಿತಿಯನ್ನು ಪಡೆಯುವುದನ್ನು ಮೀರಿ ಅಂತಹ ಮಾಹಿತಿಯ ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಅದನ್ನು ಅಳವಡಿಸಿಕೊಳ್ಳುವ ಅಥವಾ ಅಳವಡಿಕೆಗಳ ಸಾಧ್ಯತೆಯನ್ನು ಅನ್ವೇಷಿಸುವ ಮಟ್ಟಕ್ಕೆ ಏರಿದ ಪುರಾವೆಗಳು ನಮಗೆ ಕಂಡುಬಂದವು. ಹಾಗೆಯೆ, ಸಾಮಾನ್ಯವಾಗಿ ಬಹತೇಕ ವಿದ್ಯಾರ್ಥಿಗಳು ತೆಗೆದುಕೊಳ್ಳುವ ವಿಷಯಗಳು (ಸಾಮಾಜಿಕ ಅಧ್ಯಯನಗಳೂ ಸೇರಿದಂತೆ) ವಿದ್ಯಾರ್ಥಿಗಳ ಕುತೂಹಲವನ್ನು ಕೆರಳಿಸಿದ್ದನ್ನು ಅಥವಾ ಈಗಾಗಲೆ ಬೋಧಕರಾಗಲಿ, ಪಠ್ಯಗಳಾಗಲಿ ಹೇಳದೇ ಇರುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಅವರನ್ನು ತೊಡಗಿಸಿಕೊಳ್ಳುವಂತೆ ಮಾಡಿದ್ದನ್ನು ನಾವು ಕಂಡಿಲ್ಲ.

ಕೇಳಲು ತಯಾರಾಗಿ ಕುಳಿತ ವಿದ್ಯಾರ್ಥಿಗಳಿಗೆ ಜ್ಞಾನವನ್ನು ಹೊಂದಿರುವ ಬೋಧಕರು ಶಾಲಾಕೊಠಡಿಯ ಮುಂಭಾಗದಲ್ಲಿ ನಿಂತು ಅದನ್ನು ಅವರಿಗೆ ಕಲಿಸುತ್ತಿರುವ ಚಿತ್ರಣವು ನಾವು ನೋಡಿದ್ದರ ಬಹುಪಾಲು ಭಾಗವನ್ನು ನಿಖರವಾಗಿ ಪ್ರತಿನಿಧಿಸುತ್ತದೆ. ...ಮತ್ತು ಬೋಧಕರು ಬೇರೆ ರೀತಿಯಲ್ಲಿ ಬೋಧಿಸಬೇಕೆಂದು ನಾವಾದರೂ ಏಕೆ ನಿರೀಕ್ಷೆ ಮಾಡಬೇಕು? ಶಾಲೆ ಮತ್ತು ಕಾಲೇಜುಗಳಲ್ಲಿ ಅವರಿಗೆ ಕಲಿಸುತ್ತಿರುವುದೇ ಹೀಗೆ. (John Goodlad, What sone schools and classrooms teach, Educational Leadership, 40, no. 7 (1983) 15.

ಶಾಲೆಯಲ್ಲಿನ ನಿಮ್ಮ ಅನುಭವ ಮತ್ತು ವೀಕ್ಷಣೆಗಳ ಹಿನ್ನೆಲೆಯಲ್ಲಿ ಗುಡ್‌ಲ್ಯಾಡ್ ಕಂಡುಕೊಂಡಿರುವುದನ್ನು ನೀವು ಒಪ್ಪುತ್ತೀರಾ? ಇವರು ಮತ್ತು ಇವರ ಸಂಶೋಧಕರು ಏನನ್ನು ಅನಾವರಣಗೊಳಿಸಿದ್ದಾರೋ ಅದಕ್ಕಿಂತ ಹೆಚ್ಚು ಅಥವಾ ಕಡಿಮೆ ವೈವಿಧ್ಯತೆಗಳನ್ನು ನೀವು ನೋಡಿದ್ದೀರಾ? ಮಾಧ್ಯಮಿಕ ಹಂತದ ಶಾಲಾಕೊಠಡಿಗಳ ಸಾಮಾಜಿಕ ಅಧ್ಯಯನಗಳ “ವಾತಾವರಣ” ಹೇಗಿರಬೇಕೆಂದು ನೀವು ಭಾವಿಸುತ್ತೀರಿ.?

**ಮಾಡಬೇಕಾದದ್ದು**

ಎರಡು ಅಥವಾ ಮೂರು ಸಾಮಾಜಿಕ ಅಧ್ಯಯನಗಳ ಪಠ್ಯಪುಸ್ತಕಗಳನ್ನು ಸಂಗ್ರಹಿಸಿ ಮತ್ತು ಒಂದೇ ವಿಷಯ ಅಥವಾ ಕಾಲವನ್ನು ಕುರಿತ, ಉದಾಹರಣೆಗೆ, ಮೊದಲ ಮಹಾಯುದ್ಧ, ಅಥವಾ ಪ್ರಗತಿಪರ ಯುಗ, ಅಥವಾ ನಿಮಗಿಷ್ಟವಾದ ವಿಷಯವನ್ನು ಕುರಿತಂತೆ ಪಾಠ್ಯಾಂಶಗಳನ್ನು ಹುಡುಕಿ. ಅವನ್ನು ಓದಿ, ಪಾಠ್ಯಾಂಶಗಳು ಹಲವು ವಿಷಯಗಳ ಸಮ್ಮಿಳನವನ್ನು ಪ್ರತಿನಿಧಿಸುತ್ತವೆಯೋ ಅಥವಾ ಅವನ್ನು ಒಂದೇ ದೃಷ್ಟಿಕೋನದಿಂದ ಮಂಡಿಸಲಾಗಿದೆಯೊ ಎನ್ನುವುದನ್ನು ನಿರ್ಧರಿಸಿ.

## ಸಿದ್ಧಾಂತ ಹಾಗೂ ಆಚರಣೆಯ ನಡುವಿನ ಸೇತುವೆಯಾಗಿ ಗುರಿಗಳು

ಸಿದ್ಧಾಂತ

ಸಾಮಾಜಿಕ ಆಧ್ಯಯನಗಳ ಶಿಕ್ಷಣದ ತಾತ್ವಿಕ ತಳಹದಿಯನ್ನು ಗುರುತಿಸುವುದು ನಿಮಗೆ ಬಹಳ ಮುಖ್ಯವಾಗುತ್ತದೆಯೆ? ಈ ಪ್ರಶ್ನೆಗೆ "ಹೌದು" ಎನ್ನುವುದು ಸ್ಪಷ್ಟವಾದ ಉತ್ತರವಾಗಿದೆ ಎಂದು ನಾನು ಪ್ರತಿಪಾದಿಸುತ್ತೇನೆ. ಸಾಮಾಜಿಕ ಅಧ್ಯಯನಗಳ ಶಿಕ್ಷಕರಾಗಿ ನೀವು ಮಾಡುವ ಆಯ್ಕೆಗಳೆಲ್ಲವೂ ವಾಸ್ತವಿಕವಾಗಿ, ನೀವು ನಿಮ್ಮ ವಿದ್ಯಾರ್ಥಿಗಳಿಗೆ ನಿಗದಿಡಿಸಿದ ಗುರಿಗಳು ಮತ್ತು ಕಲಿಕೆಯ ಉದ್ದೇಶಗಳನ್ನು ಅವಲಂಬಿಸಿರುತ್ತವೆ. ಧ್ಯೇಯೋದ್ಧೇಶಗಳು ಮತ್ತು ಗುರಿಗಳು ತಮ್ಮ ಸ್ವರೂಪವನ್ನು ಸಿದ್ಧಾಂತ ಹಾಗೂ ತಾತ್ವಿಕ ನಿರೂಪಣೆಯಿಂದ ಪಡೆದುಕೊಂಡಿರುತ್ತವೆ; ಅವು ತಾತ್ವಿಕತೆ ಮತ್ತು ಆಚರಣೆಯ ನಡುವಿನ ಕೊಂಡಿಯಾಗಿರುತ್ತವೆ. ಉದಾಹರಣೆಗೆ, ಸಾಮಾನ್ಯವಾಗಿ ಮಾಧ್ಯಮಿಕ ಶಾಲೆಯ ಸಾಮಾಜಿಕ ಅಧ್ಯಯನಗಳ ವಿದ್ಯಾರ್ಥಿಗಳಿಗಾಗಿ ಇರುವ ಈ ಕೆಳಗಿನ ಉದ್ಧೇಶಗಳನ್ನು ನೋಡಿ:

1. ವಿದ್ಯಾರ್ಥಿಗಳು ಎರಡನೆ ಮಹಾಯುದ್ಧದ ಪ್ರಮುಖ ದಿನಾಂಕಗಳು, ಸ್ಥಳಗಳು ಮತ್ತು ಘಟನೆಗಳನ್ನು ಅಭ್ಯಸಿಸುತ್ತಾರೆ.
2. ವಿದ್ಯಾರ್ಥಿಗಳು ಸಾಮಾನ್ಯವಾಗಿ ಬಳಸಲ್ಪಡುವ ಕಾನೂನಿನ ಪದಗುಚ್ಛಗಳನ್ನು ಕಂಠಪಾಠ ಮಾಡುತ್ತಾರೆ,
3. ಇಸ್ರೇಲ್ ಮತ್ತು ಪ್ಯಾಲಸ್ತೇನಿಯರನ್ನು ಪ್ರತ್ಯೇಕಿಸುವ ಐದು ಸಂಗತಿಗಳನ್ನು ವಿದ್ಯಾರ್ಥಿಗಳು ಪಟ್ಟಿ ಮಾಡುತ್ತಾರೆ.

ಈ ಗುರಿಗಳು ಸಮಾನ ಅಂಶಗಳನ್ನು ಹೊಂದಿವೆ: ದತ್ತಾಂಶ ಸಂಗ್ರಹ. ಅವು ಸಾಮಾಜಿಕ ಅಧ್ಯಯನಗಳ ನಿಟ್ಟಿನ ನೀತಿಬೋಧಕ, ಸಾಂಸ್ಕೃತಿಕ ಪ್ರಸರಣದ ದೃಷ್ಟಿಕೋನದಿಂದ ಪಡೆದುಕೊಂಡ ವಿಧಾನಗಳನ್ನು, ವಸ್ತುಗಳನ್ನು ಮತ್ತು ಪ್ರಶ್ನೆಗಳನ್ನು ಸೂಚಿಸುತ್ತವೆ. ಈಗ ಗುರಿಗಳ ಎರಡನೆಯ ಗುಂಪನ್ನು ನೋಡಿ:

4. ಇಸ್ರೇಲ್ ಮತ್ತು ಪ್ಯಾಲಸ್ತೇನಿ ಜನರ ಪ್ರಭುತ್ವಗಳ ನೀತಿಯ ನಿಲುವುಗಳನ್ನು ವಿದ್ಯಾರ್ಥಿಗಳು ಹೋಲಿಕೆ ಮಾಡುತ್ತಾರೆ ಮತ್ತು ವ್ಯತ್ಯಾಸಗಳನ್ನು ಗುರುತಿಸುತ್ತಾರೆ.

5. ಇತ್ತೀಚಿನ ಮತ್ತು ಪ್ರಾಚೀನ ಕಾಲದ ನಿರಂಕುಶತ್ವದ ಉದಯದ ಕೆಲವು ಕಾರಣಗಳನ್ನು ಮತ್ತು ಪರಿಣಾಮಗಳನ್ನು ವಿದ್ಯಾರ್ಥಿಗಳು ಚರ್ಚಿಸುತ್ತಾರೆ.

6. ಒಂದು ನಿರ್ದಿಷ್ಟ ರಾಷ್ಟ್ರದ ಆರ್ಥಿಕ ಬೆಳವಣಿಗೆಯ ಸಿದ್ಧಾಂತವನ್ನು ರೂಪಿಸಲು ವಿದ್ಯಾರ್ಥಿಗಳು ದತ್ತಾಂಶ ವಿಶ್ಲೇಷಣೆ ಮತ್ತು ಸಾರ್ವತ್ರೀಕರಣವನ್ನು ಉಪಯೋಗಿಸುತ್ತಾರೆ.

ಇವೆಲ್ಲಾ ಗುರಿಗಳು ಸಾಮಾಜಿಕ ಅಧ್ಯಯನಗಳ ನಿಟ್ಟಿನಲ್ಲಿ ಚಿಂತನಶೀಲ ದೃಷ್ಟಿಕೋನವನ್ನು ಒಳಗೊಳ್ಳುತ್ತವೆ; ದತ್ತಾಂಶಗಳ ವಿಂಗಡಣೆ ಮತ್ತು ತೀರ್ಮಾನಗಳನ್ನು ಕೈಗೊಳ್ಳುವುದರ ಮೂಲಕ ಅವು ಸಾಮಾಜಿಕ ವಿಜ್ಞಾನಗಳ ಪ್ರಕ್ರಿಯೆಗೆ ಒತ್ತು ನೀಡುತ್ತವೆ.

ಅಂತಿಮವಾಗಿ ಗುರಿಗಳ ಮೂರನೆಯ ಗುಂಪು ಇಲ್ಲಿದೆ.

1. ಇರಾಕ್ ಮತ್ತು ಮದ್ಯ ಪ್ರಾಚ್ಯಕ್ಕೆ ಸಂಬಂಧಿಸಿದಂತೆ ಅಮೇರಿಕಾದ ವಿದೇಶಾಂಗ ನೀತಿಯನ್ನು ವಿದ್ಯಾರ್ಥಿಗಳು ಅಭ್ಯಸಿ, ಮೌಲ್ಯಮಾಪನಮಾಡುತ್ತಾರೆ.

2. ವಿದ್ಯಾರ್ಥಿಗಳು ಅವರ ಪ್ರದೇಶದಲ್ಲಿ ಕಂಡುಬರುವ ಅತ್ಯಂತ ತುರ್ತಾದ ಪರಿಸರದ ಸಮಸ್ಯೆಗಳನ್ನು ಗುರುತಿಸುತ್ತಾರೆ ಮತ್ತು ಅದನ್ನು ಪರಿಹರಿಸುವ ನಿಟ್ಟಿನ ಕ್ರಿಯೆಯನ್ನು ಸೂಚಿಸುತ್ತಾರೆ.

3. ಮರಣದಂಡನೆಯ ನೈತಿಕ ಮತ್ತು ಸದಾಚಾರದ ಆಯಾಮಗಳನ್ನು ಕುರಿತು ಚರ್ಚಿಸುತ್ತಾರೆ.

ಇವೆಲ್ಲಾ ಗುರಿಗಳು ಮೌಲ್ಯಗಳ ಪರೀಕ್ಷೆಗೆ ಬದ್ಧವಾಗಿವೆ ಮತ್ತು ಸಾಮಾಜಿಕ ವಿಮರ್ಶೆ, ಸಾಮಾಜಿಕ ಕ್ರಿಯೆ, ಮತ್ತು ಪೌರತ್ವ ಪರಂಪರೆಗಳ ವಿವಿಧ ಅಂಶಗಳನ್ನು ಪ್ರತಿನಿಧಿಸುತ್ತವೆ. ಎಲ್ಲವೂ ಸಾಮಾಜಿಕ ಅಧ್ಯಯನಗಳ ಶಿಕ್ಷಣದಲ್ಲಿನ ವಿವಾದಾತ್ಮಕ ವಿಷಯಗಳನ್ನು ಮತ್ತು ಪರಿಣಾಮಕಾರಿ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತವೆ.

ಖಂಡಿತವಾಗಿಯೂ, ಇವುಗಳ ಹಾಗೆ ಸಾಮಾಜಿಕ ಅಧ್ಯಯನಗಳ ಮೂರು ಪ್ರಮುಖ ಆಯಾಮಗಳಲ್ಲಿನ ಯಾವುದಾದರೊಂದರಿಂದ ಶಾಲಾಕೊಠಡಿಯ ಧ್ಯೇಯೋದ್ದೇಶಗಳು ಸದಾ ಸ್ಪಷ್ಟವಾಗಿ ಪ್ರಾಪ್ತವಾಗಿರುವುದಿಲ್ಲ. ಆದರೆ ಗುರಿಗಳು ಬಹುತೇಕವಾಗಿ ಯಾವಾಗಲೂ ಈ ಆಯಾಮಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಪ್ರತಿಬಿಂಬಿಸುತ್ತವೆ ಮತ್ತು ಆಯಾಮಗಳ ಪರಿಸರಗಳು ಮತ್ತು ಇತಿಹಾಸಗಳ ನಿಮ್ಮ ಜ್ಞಾನವು ನಿಮ್ಮ ಗುರಿಗಳನ್ನು ಪರಿಣಾಮಕಾರಿಯಾಗಿ ಆಯ್ಕೆ ಮಾಡುವ ಸಾಮರ್ಥ್ಯವನ್ನು ಕೊಡುತ್ತದೆ ಮತ್ತು ಸೂಕ್ತ ಸಾಮಗ್ರಿ, ವಿಧಾನ, ಹಾಗೂ ಭೋಧನೆಯ ಕಾರ್ಯನೀತಿಗಳೊಂದಿಗೆ ಅವುಗಳನ್ನು ಬೆಂಬಲಿಸುತ್ತದೆ.

ಕಾರಣಗಳು ಮತ್ತು ಗುರಿಗಳು ವಿಭಿನ್ನವಾಗಿದ್ದರೂ ಕೂಡ ಉತ್ತಮ ಗುಣಮಟ್ಟದ ವಿವೇಚನೆಯ ಕೌಶಲವನ್ನು ಬೆಳೆಸುವುದು ಅತ್ಯಂತ ಮಹತ್ವದ ಗುರಿ ಎನ್ನುವುದರ ಬಗ್ಗೆ ಬಹಳಷ್ಟು ಸಹಮತವಿದೆ, ಆದರೆ ಸಾಮಾನ್ಯವಾಗಿರುವ ಪ್ರಬಲ ಸಂಸ್ಕೃತಿಯ ಪರಂಪರೆ ಮತ್ತು ಸಂಪ್ರದಾಯಗಳನ್ನು ಬೋಧಿಸುವುದಕ್ಕೆ ಪ್ರತಿಯಾಗಿ ಸಮಕಾಲೀನ ಮತ್ತು ವಿವಾದಾತ್ಮಕ ವಿಷಯಗಳನ್ನು ಬೋಧಿಸುವುದಕ್ಕೆ ಎಷ್ಟು ಒತ್ತು ಕೊಡಬೇಕು ಎನ್ನುವುದರ ಕುರಿತು ಬಹಳಷ್ಟು ಭಿನ್ನಮತವಿದೆ. ಅದೇ ರೀತಿ ವಾಸ್ತವವಾಗಿ, ಎಲ್ಲ ತಾತ್ವಿಕ ನಿಲುವುಗಳ ಪ್ರತಿಪಾದಕರು ಜಾಗತಿಕ ಅಧ್ಯಯನಗಳ ಮತ್ತು ಅಮೇರಿಕಾದ ಇತಿಹಾಸದ ಅವಶ್ಯಕತೆಯಂತಹ ವಿಷಯಗಳನ್ನು ಬೆಂಬಲಿಸುತ್ತಾರೆ, ಆದರೆ ವಿಮರ್ಶಾ

ಚಿಂತನೆಯ ಎದುರು (versus) ಪಕ್ಷಪಾತವುಳ್ಳ ತತ್ತ್ವ ಮತ್ತು ಮೌಲ್ಯಭರಿತದ ಎದುರು ಮೌಲ್ಯ-ಮುಕ್ತ ಬೋಧನೆಯ ಕುರಿತು ತೀವ್ರವಾದ ವಾದವಿವಾದದಲ್ಲಿ ತೊಡಗುತ್ತಾರೆ.

ಪಾಂಡಿತ್ಯಪೂರ್ಣ ನಿಯತಕಾಲಿಕೆಗಳಲ್ಲಿ ಈ ದೃಷ್ಟಿಕೋನಗಳ ಕುರಿತು ಚರ್ಚೆಗಳು ಬಿರುಸಾಗಿ ನಡೆಯುತ್ತವೆಯಾದರೂ, ಶಾಲಾಕೊಠಡಿಯಲ್ಲಿ ಏನು ನಡೆಯುತ್ತದೆಯೊ ಅದು ಹೆಚ್ಚು ವಾಸ್ತವ ಮತ್ತು ಸ್ಥಿರವಾಗಿರುತ್ತದೆ. ಶಾಲಾಕೊಠಡಿಯ ಬೋಧಕರು ವಿಷಯವಸ್ತುಗಳು, ಕಾಲಾನುಕ್ರಮಣಿಕೆ ಮತ್ತು ವ್ಯಾಪ್ತಿ, ಪಠ್ಯಕ್ರಮ ಸಾಮಗ್ರಿ, ಕಾರ್ಯತಂತ್ರಗಳು, ಮತ್ತು ಪರೀಕ್ಷಣ(testing)ಗಳಲ್ಲಿ ತೊಡಗಿಕೊಳ್ಳುವುದರತ್ತ ಒಲವು ತೋರುತ್ತಾರೆ. ಹಾಗಿದ್ದೂ ಸಾಮಾಜಿಕ ಅಧ್ಯಯನಗಳು ಅಸಮಗ್ರ ಚಲನಶೀಲ ಕ್ಷೇತ್ರ ಎನ್ನುವುದನ್ನು ನೀವು ಗುರುತಿಸುವುದು ಮುಖ್ಯವಾಗುತ್ತದೆ: ಸ್ವೀಕಾರ್ಯ ವ್ಯಾಖ್ಯೆಯ ಕೊರತೆಯಿಂದ ಹಿಡಿದು ವೈಧಾನಿಕತೆ ಮತ್ತು ವಿಷಯವಸ್ತುವಿನವರೆಗೆ ಒಂದು ಸ್ತರದ ಅನಿಶ್ಚಿತತೆಯಿದೆ. ಅಂತಹ ಅಂತರ್ಗತ ಅನಿಶ್ಚಿತತೆಯು ಸಮಸ್ಯಾತ್ಮಕವಾಗಿದ್ದರೂ ಕೂಡ ವಾಸ್ತವದಲ್ಲಿ ನಿಮಗೆ ಒಂದು ಸಮರ್ಥ ಸಾಧನವನ್ನು ಒದಗಿಸುತ್ತದೆ: ನಿಮ್ಮ ನಿರ್ದಿಷ್ಟ ಜಿಲ್ಲೆಯ ಅಗತ್ಯಗಳ ಮಿತಿಗಳೊಳಗೆ ನಿಮ್ಮದೇ ದೃಷ್ಟಿಕೋನವನ್ನು ಆಯ್ಕೆಮಾಡಿಕೊಳ್ಳುವ ಸ್ವಾತಂತ್ರ್ಯ, ಮತ್ತು ನಿಮ್ಮದೇ ಗುರಿಗಳನ್ನು ನಿಗದಿಪಡಿಸುವ, ಪಾಠಗಳನ್ನು ವಿನ್ಯಾಸಗೊಳಿಸುವ, ಕಾರ್ಯತಂತ್ರಗಳನ್ನು ಆರಿಸಿಕೊಳ್ಳುವ, ಮತ್ತು ಹತ್ತಿರದ ಮತ್ತು ದೀರ್ಘಕಾಲದ ನಿರ್ಣಯಗಳಿಗೆ ಮಾರ್ಗದರ್ಶನ ನೀಡುವ ಬೋಧನೆಯ ತತ್ವವನ್ನು ರೂಪಿಸುವ ಸ್ವಾತಂತ್ರ್ಯ.

ನಿಮಗೇನನಿಸುತ್ತದೆ?

ಎನ್.ಸಿ.ಎಸ್.ಎಸ್.ನ್ನು ಚರ್ಚಿಸುವಾಗ ಆಗಿನ ಎನ್.ಸಿ.ಎಸ್.ಎಸ್. ಅಧ್ಯಕ್ಷರಾದ ಶಿರ್ಲೆ ಎಂಗಲ್ ಅವರು ಗಮನಿಸಿದ ವಿಷಯವು ಹೀಗಿದೆ: ಸದಸ್ಯರು ಮತ್ತು ಅದರ ನಾಯಕರು "ಮಕ್ಕಳ ಹಾಗೂ ಯುವಕರ ಸಾಮಾಜಿಕ ಶಿಕ್ಷಣದ ಸಮಾನ ಕಾಳಜಿಯಿಂದ ನೆಮ್ಮದಿರಹಿತವಾಗಿಯೇ ಒಂದುಗೂಡಿದ್ದಾರೆ.... [ನಾವು] ಸಾಮಾಜಿಕ ಶಿಕ್ಷಣವನ್ನು ಸಾಮಾಜಿಕ ವಿಜ್ಞಾನಗಳೆಂದು ಭ್ರಮಿಸಿ ನಮ್ಮ ದಕ್ಷತೆಯ ಕ್ಷೇತ್ರದ ವ್ಯಾಖ್ಯಾನವನ್ನು ತಪ್ಪಿಸುತ್ತೇವೆ... ಮತ್ತು ನಮ್ಮ ಸದಸ್ಯರಿಗೆ ಶಿಕ್ಷಣದ ಕುರಿತಾದ ಒಂದು ಪ್ರಕಾರದ ತಿನಿಸುಗಳು ಮತ್ತು ಸೇವೆಗಳ ಸಮೂಹವನ್ನು ಒದಗಿಸುತ್ತೇವೆ, ಇದರ ನಡುವೆ ಯಾವುದೇ ನಂಬಿಕಾರ್ಹವಾದ ತಾತ್ವಿಕ ಅಥವಾ ಶಿಕ್ಷಣಶಾಸ್ತ್ರದ ನಿಲುವುಗಳು ಇರುವುದಿಲ್ಲ, ಮತ್ತು ಪ್ರತಿಯೊಬ್ಬರೂ ಅವರ ಆಸಕ್ತಿ ಅಥವಾ ಒಲವುಗಳಿಗನುಸಾರವಾಗಿ ತಮಗಿಷ್ಟ ಬಂದದ್ದನ್ನು ಆರಿಸಿಕೊಳ್ಳಬಹುದು... ಸಾಮಾಜಿಕ ಶಿಕ್ಷಣದ ಬಗ್ಗೆ ಯಾವುದೇ ಸ್ಪಷ್ಟ ಮತ್ತು ಸುಸಂಗತ ನಿಲುವಿಲ್ಲದೆ ಮತ್ತು ಹಾಗೆಯೆ ನಮ್ಮ ಕ್ಷೇತ್ರದ ಬಗ್ಗೆ ಯಾವುದೇ ಸ್ಪಷ್ಟ ವ್ಯಾಖ್ಯಾನವಿಲ್ಲದೆ."*

- Shirley Engle, The Future of Social Studies Education and NCSS, Social Education, 34 (1970), 778-81, 795.

ಸಾಮಾಜಿಕ ಅಧ್ಯಯನಗಳ ಸ್ಪಷ್ಟವಾದ ವ್ಯಾಖ್ಯಾನ ಸಾಧ್ಯವೆಂದು ನಿಮಗನಿಸುತ್ತದೆಯೆ? ಪ್ರತಿನಿತ್ಯದ ಬೋಧನೆಗೆ ಅದು ಅನುಕೂಲವೆ ಅಥವಾ ಅನನುಕೂಲವೆ? ಭವಿಷ್ಯದಲ್ಲಿ ಗಂಭೀರ ಸಮಸ್ಯೆಯಾಗಲಿದೆಯೆ? ನಿಮ್ಮ ಅಭಿಪ್ರಾಯಗಳ ಬಗ್ಗೆ ಯೋಚಿಸಿ: ನೀವು ಈ ಕ್ಷೇತ್ರವನ್ನು ಹೇಗೆ ವ್ಯಾಖ್ಯಾನಿಸುತ್ತೀರಿ?

ಆಚರಣೆ

ನಾವು ಹೇಳಿರುವಂತೆ ಸಾಮಾಜಿಕ ಅಧ್ಯಯನಗಳ ಉದ್ದೇಶಗಳು, ವಿಧಾನಗಳು, ಘಟಕಗಳು, ಪಾಠಗಳು, ಮತ್ತು ಪಾಠ್ಯಕ್ರಮಗಳು ಪ್ರಜ್ಞಾಪೂರ್ವಕವಾಗಿ ಅಥವಾ ಅಪ್ರಜ್ಞಾಪೂರ್ವಕವಾಗಿ ವಿಷಯದ ಅಂತಿಮ ಗುರಿಗಳ ಬಗ್ಗೆ ಒಂದು ನಿರ್ದಿಷ್ಟ ಅಥವಾ ಸಂಗ್ರಹಿತ ಅಭಿಪ್ರಾಯಗಳನ್ನು ಪ್ರತಿಬಿಂಬಿಸುತ್ತವೆ. ಆದರೆ ಆಚರಣೆಯಲ್ಲಿ ಬೋಧಕರು ವಿದ್ಯಾರ್ಥಿಗಳಿಗೆ ಸಮಗ್ರ ದೃಷ್ಟಿಕೋನವಿಲ್ಲದ, ಮತ್ತು ಕೆಲವೊಮ್ಮೆ ಅಸಂಗತವೆನಿಸಿದ ಸಾಮಗ್ರಿಗಳ ಸಂಗ್ರಹವನ್ನು ಕೊಡುತ್ತಾರೆ. ಸಾಮಾಜಿಕ ಅಧ್ಯಯನಗಳ ಪಾಠ್ಯಕ್ರಮವು ಶಿಕ್ಷಣದ ತಾತ್ವಿಕತೆಯ ಮಾರ್ಗದರ್ಶನದಲ್ಲಿ ವಿವೇಚನಾಯುತವಾಗಿ, ಸುನಿಯೋಜಿತ ವ್ಯಾಪ್ತಿ ಮತ್ತು ಕ್ರಮಾನುಗತಿಯ ವಿಕಸನದಿಂದ ವ್ಯಾಖ್ಯಾನಿಸಲ್ಪಡುವುದಕ್ಕಿಂತಲೂ ಹೆಚ್ಚಾಗಿ ರಾಜ್ಯದ, ನಗರದ, ಅಥವಾ ಜಿಲ್ಲೆಯ ಅಗತ್ಯಕ್ಕಗಳಿಗನುಗುಣವಾಗಿ ವ್ಯಾಖ್ಯಾನಿಸಲ್ಪಡುತ್ತದೆ. ಸಾಮಾನ್ಯವಾಗಿ ಕಂಡುಬರುವ ಮಾಧ್ಯಮಿಕ ಶಾಲೆಯ ಸಾಮಾಜಿಕ ಅಧ್ಯಯನಗಳ ಈ ಪಾಠ್ಯಕ್ರಮ ಯೋಜನೆಯನ್ನು ಗಮನಿಸಿ:

ವರ್ಗ 7: ವಿಶ್ವ ಸಂಸ್ಕೃತಿ/ಜಾಗತಿಕ ಇತಿಹಾಸ/ಜಾಗತಿಕ ಭೂಗೋಳಶಾಸ್ತ್ರ/ ರಾಜ್ಯ ಇತಿಹಾಸ

ವರ್ಗ 8: ಅಮೇರಿಕಾ ಇತಿಹಾಸ

ವರ್ಗ 9: ವಿಶ್ವ ಸಂಸ್ಕೃತಿ/ಜಗತ್ತಿನ ಇತಿಹಾಸ/ಪೌರನೀತಿ/ಸರ್ಕಾರ/ ರಾಜ್ಯ ಇತಿಹಾಸ

ವರ್ಗ 10: ವಿಶ್ವ ಸಂಸ್ಕೃತಿಯ ಇತಿಹಾಸ

ವರ್ಗ 11: ಅಮೇರಿಕಾದ ಇತಿಹಾಸ/ಅಮೇರಿಕಾದ ಅಧ್ಯಯನಗಳು

ವರ್ಗ 12: ಅಮೇರಿಕಾದ ಸರಕಾರ/ಮಾನವಶಾಸ್ತ್ರ, ಅರ್ಥಶಾಸ್ತ್ರ, ಮನಃಶಾಸ್ತ್ರ, ಸಮಾಜಶಾಸ್ತ್ರ, ಅಮೇರಿಕಾದ ಪ್ರಜಾಪ್ರಭುತ್ವದ ಸಮಸ್ಯೆಗಳನ್ನು ಒಳಗೊಂಡ ಆಯ್ಕೆಯ ವಿಷಯಗಳು.

ಈ ಕ್ರಮಾನುಗತಿಯು ಎರಡನೆ ಮಹಾಯುದ್ಧದ ಕಾಲದಿಂದಲೂ ಅಥವಾ ಅದಕ್ಕೂ ಮೊದಲಿನಿಂದಲೂ ಗಮನಾರ್ಹವಾಗಿ ಬದಲಾಗಿಲ್ಲ. ಪಾಠ್ಯಕ್ರಮಗಳು ವರ್ಗದ ನಿಟ್ಟಿನಲ್ಲಿ ವಿಭಿನ್ನವಾಗಿರಬಹುದು ಮತ್ತು ವಿಷಯಗಳು ಅಲ್ಪಸ್ವಲ್ಪ ಬದಲಾಗಿರಬಹುದು, ಅದರೆ ಸಾಮಾನ್ಯ ವಿನ್ಯಾಸ ಮಾತ್ರ ದಶಕಗಳಿಂದಲೂ ಹಾಗೆಯೆ ಉಳಿದುಬಂದಿದೆ. ಪುನರಾವರ್ತಿತಗೊಳ್ಳುವ ಮತ್ತು ಕೆಲವೊಮ್ಮೆ ಅತಾರ್ಕಿಕವಾಗಿರುವ ಕ್ರಮಾನುಗತಿಯ ಜೊತೆಗೆ ವಿದ್ಯಾರ್ಥಿಗಳು ಪರಸ್ಪರ ಸಂಘರ್ಷದಿಂದ ಕೂಡಿರುವ ಸಿದ್ಧಾಂತದಿಂದ ಪಡೆದುಕೊಳ್ಳಲಾಗಿರುವ ಪಾಠಗಳೊಂದಿಗೆ ಪದೇಪದೇ ಹೆಣಗಬೇಕಾಗುತ್ತದೆ. ಉದಾಹರಣೆಗೆ, ಒಂದು ದಿನ ಅವರನ್ನು ಮೊದಲನೆ ಮಹಾಯುದ್ಧದ ದಿನಾಂಕಗಳನ್ನು ನೆನಪಿಟ್ಟುಕೊಳ್ಳುವಂತೆ ಕೇಳಲಾಗುತ್ತದೆ; ಮರುದಿನ ಆಕ್ರಮಣ ಮತ್ತು ಅದರ ಫಲಿತಾಂಶವನ್ನು ವಿವರಿಸುವ ಊಹಾಸಿದ್ಧಾಂತಗಳನ್ನು ಗಮನದಲ್ಲಿರಿಸಿಕೊಂಡು, ಜರ್ಮನಿಯ ಸಂಘರ್ಷದ ಪರಿಣಾಮಗಳನ್ನು ವಿಶ್ಲೇಷಿಸಬೇಕಾಗುತ್ತದೆ, ಮತ್ತು ಅದರ ಮುರುದಿನ ಎರಿಕ್ ರೆಮಾರ್ಕ್‌ನ ಆಲ್ ಕ್ವೈಟ್ ಆನ್ ದಿ ವೆಸ್ಟರ್ನ್ ಫ್ರಾಂಟ್‌ನಲ್ಲಿ ಚಿತ್ರಿಸಲಾದ ಕಂದಕದ ಯುದ್ಧದ ನೈತಿಕತೆಯನ್ನು ಪರೀಕ್ಷಿಸಬೇಕು.

ಸಾಮಾಜಿಕ ಅಧ್ಯಯನಗಳ ಬೋಧಕರು ಪಠ್ಯಕ್ರಮವನ್ನಷ್ಟೆ ಅಲ್ಲದೆ ಶಾಲಾಕೊಠಡಿಯ ಇತರ ವಾಸ್ತವಗಳನ್ನೂ ಎದುರಿಸಬೇಕಾಗುತ್ತದೆ. ಅವುಗಳು ಯಾವುವೆಂದರೆ: ಅತ್ಯಂತ ಹೆಚ್ಚಿನ ಸಂಖ್ಯೆಯ ವಿಷಯಗಳನ್ನು ಬೋಧಿಸಬೇಕಾದ

ಒತ್ತಡ, ಕಡಿಮೆ ಸ್ಥಳದಲ್ಲಿ ಹೆಚ್ಚು ಸಂಖ್ಯೆ ವಿದ್ಯಾರ್ಥಿಗಳನ್ನು ತುಂಬಿರುವುದು, ಕೆಲವು ವೇಳೆ ವಿದ್ಯಾರ್ಥಿ ಶ್ರೋತೃಗಳಿಂದ ಪ್ರತಿಕೂಲ ಪ್ರತಿಕ್ರಿಯೆ, ಯೋಜನೆ ಮತ್ತು ತಯಾರಿಗೆ ಸಮಯದ ಅಭಾವ, ಮತ್ತು ಸಹಪಾಠಿಗಳ ನಡುವೆ ಒಂಟಿಯಾಗಿರುವ ಶಾಲಾ ಸಂಸ್ಕೃತಿ. ಆಗಾಗ್ಗೆ ಪ್ರಕ್ಷುಬ್ಧ ಹಾಗೂ ಪ್ರಶ್ನಿಸುವ ಮನಸ್ಥಿತಿಯ ಅಪಾರ ಸಂಖ್ಯೆಯ ಕಿಶೋರಾವಸ್ಥೆಯ ವಿದ್ಯಾರ್ಥಿಗಳಿಗೆ 40ರಿಂದ 60 ನಿಮಿಷಗಳ ನಿಯತ ಅವಧಿಯಲ್ಲಿ ಒಂದೆರಡು ದಶಮಾನಗಳಷ್ಟು ಹಳೆಯದಾದ ಪಠ್ಯಪುಸ್ತಕವನ್ನು ಉಪಯೋಗಿಸಿ, ಸಂಬದ್ಧ ಸಂಗತಿಗಳನ್ನೂ ಒಳಗೊಂಡಂತೆ ಅಮೇರಿಕಾ ಮತ್ತು ಜಗತ್ತಿನ ಅಧ್ಯಯನಗಳಷ್ಟು ವಿಶಾಲ ವ್ಯಾಪ್ತಿಯ ವಿಷಯವನ್ನು ನ್ಯಾಯೋಚಿತವಾಗಿ ತಲುಪಿಸಲು ಪ್ರಯತ್ನಿಸುತ್ತಾ, ಕೊಠಡಿಯ ತುಂಬಾ ಓಡಾಡುವ ನೀವು ಒಂದು ಪರಿಪೂರ್ಣ ಸಾಮಾಜಿಕ ಅಧ್ಯಯನಗಳ ಪಾಠದ ಪಥವನ್ನು ಕಳೆದುಕೊಳ್ಳಬಹುದು. ವಾಸ್ತವದಲ್ಲಿ ನೀವು ಅಧ್ಯಯನ ವಿಷಯದಿಂದಲೇ ದೂರಸರಿಯಲೂಬಹುದು! ಬೋಧಿಸಬೆಕಾದ ಮಾಹಿತಿ ಅಸಂಖ್ಯಾತವಾಗಿದೆ, ಆಚರಣೆಯಲ್ಲಿ ತರಬೇಕಾದ ಕೌಶಲಗಳೂ ವಿಪರೀತವಾಗಿವೆ, ಆದರೆ ನಿಗದಿಪಡಿಸಲಾದ ಪ್ರತಿಯೊಂದೂ ಗುರಿಯನ್ನು ಸಾಧಿಸಲು ಇರುವ ಸಮಯ ಮಾತ್ರ ಅತ್ಯಲ್ಪ. ಕೇಳುಗರು ಪ್ರಕ್ಷುಬ್ಧರಾಗಿರಬಹುದು ಇಲ್ಲವೆ ಉಪದ್ರವಿಗಳಾಗಿರಬಹುದು.

ಇಷ್ಟಲ್ಲದೆ, ಈ ಅಸಾಧ್ಯವಾದುದನ್ನು ಸಾಧಿಸಲು ನೀವು ಪ್ರಯತ್ನ ಮಾಡುತ್ತಿರುವಾಗಲೆ ಪ್ರಾಂಶುಪಾಲರಿಂದ, ಪೋಷಕರಿಂದ, ಮತ್ತು ಸಹೋದ್ಯೋಗಿಗಳಿಂದ, ಕೆಲವೊಂದು ಸಂದರ್ಭಗಳಲ್ಲಿ ತನ್ನತ್ತ ಗಮನ ಸೆಳೆಯಲೋಸುಗ ರಾಜ್ಯ, ಕೌಂಟಿ, ಅಥವ ಸ್ಥಾನೀಯ ಶಿಕ್ಷಣ ಮಂಡಳಿಗಳಿಂದ ಇತರ ಹಲವಾರು ಬೇಡಿಕೆಗಳು ಹುಟ್ಟಿಕೊಳ್ಳುತ್ತವೆ. ರಾಷ್ಟ್ರೀಯ ಗುಣಮಟ್ಟದಲ್ಲಿ ಅಥವಾ ವೈವಿಧ್ಯತೆಯ ಅಗತ್ಯ ಮತ್ತು ಅದನ್ನು ಕುರಿತ ಚರ್ಚಾಂಶಗಳಲ್ಲಿ ಉಕ್ಕೇರುವ ಆಸಕ್ತಿ, ಸುಧಾರಿತ ಅರ್ಥಶಾಸ್ತ್ರ ಬೋಧನೆಗೆ ಆಹ್ವಾನ, ಅಥವಾ "ಸಮಗ್ರ ಪಠ್ಯಕ್ರಮಗಳನ್ನು ಒಳಗೊಂಡಂತೆ" ಉತ್ತಮ ಬರವಣಿಗೆಯ ನಿಟ್ಟಿನ ತೀವ್ರಾಭಿವ್ಯಕ್ತಿಯಂತಹ ಹಳೆಯ ಅಥವಾ ಹೊಸ ಗುರಿಗಳು ಪ್ರಾಮುಖ್ಯತೆ ಪಡೆಯಬಹುದು, ಇವೆಲ್ಲವನ್ನೂ ಈಗಾಗಲೆ ಮಿತಿಮೀರಿದ ಪಠ್ಯಕ್ರಮದೊಳಗೆ ತುರುಕಲಾಗುತ್ತದೆ. ಇಲ್ಲಿ ಸಮಯ ಮತ್ತು ಯೋಜನೆಗಳೆರಡೂ ಕನಿಷ್ಠ ಮಟ್ಟದಲ್ಲಿರುತ್ತವೆ. ಉದಾಹರಣೆಗೆ, ಈ ಪುಸ್ತಕ ಮುದ್ರಣಕ್ಕೆ ಹೋಗುತ್ತಿರುವ ಸಮಯದಲ್ಲಿನ ನ್ಯೂಯಾರ್ಕ್‌ನ ಮಾಧ್ಯಮಿಕ ಪ್ರೌಢಶಾಲೆಯ ಬೋಧಕರ ಪರಿಸ್ಥಿತಿಯನ್ನು ಪರಿಗಣಿಸಿ. ಒಂದೆಡೆಯಿಂದ ಹೊಸದಾಗಿ ಪುನರ್ರಚಿಸಲಾದ ನಗರ ಶಿಕ್ಷಣ ವಿಭಾಗವು ಬೋಧಕರಿಗೆ ಅವರು ಹೇಗೆ ಬೋಧಿಸಬೇಕು ಎಂಬುದನ್ನಷ್ಟೇ ಅಲ್ಲದೆ, ತಮ್ಮ ಶಾಲಾಕೊಠಡಿಯಲ್ಲಿ ಕೂರುವ ವ್ಯವಸ್ಥೆಯನ್ನು ಹೇಗೆ ಮಾಡಬೇಕು ಮತ್ತು ಹೇಗೆ ಅಲಂಕರಿಸಬೇಕು ಎಂದು ಹೇಳಿಕೊಡುತ್ತಿದೆ. ಮತ್ತೊಂದೆಡೆಯಿಂದ ಈ ಬೋಧಕರು ವಿದ್ಯಾರ್ಥಿಗಳಿಗೆ ರಾಜ್ಯವು ನಿಗದಿಪಡಿಸಿದ ಅಮೇರಿಕಾ ಮತ್ತು ಜಾಗತಿಕ ಇತಿಹಾಸದ (ಒಳಗೊಳ್ಳಬೇಕಾದ ವಿಷಯಗಳನ್ನು ಸ್ಪಷ್ಟವಾಗಿ ನಿಗದಿಪಡಿಸಲಾಗಿದೆ) ಪರೀಕ್ಷೆಯನ್ನು ಪಾಸು ಮಾಡುವಂತೆ ತರಬೇತಿ ನೀಡಬೇಕು.

ಇಂತಹ ಸನ್ನಿವೇಶಗಳು ಬೋಧನೆಯು ಏಕೆ ಪರಿಪೂರ್ಣವಾಗಿರುವುದಿಲ್ಲ ಎನ್ನುವುದಕ್ಕೆ ಕಾರಣಗಳಿವೆ ಎಂದು ನೀವು ನಂಬುವಂತೆ ಮಾಡಬಹುದು, ಮತ್ತು ಹೀಗಿದ್ದೂ ಏಕೆ ಜನರು ಘನವಾದ ಗುರಿಗಳಿಗಾಗಿ, ತಾತ್ವಿಕತೆಗಾಗಿ, ಮತ್ತು ಬೋಧನಾ ವೈಧಾನಿಕತೆಗಾಗಿ ಹೋರಾಡುತ್ತಿದ್ದಾರೆ ಎಂದು ನಿಮಗೆ ಆಶ್ಚರ್ಯವಾಗಬಹುದು. ಏಕೆ ಎಲ್ಲ ಬೋಧಕ ಸಮುದಾಯವು ದಿನಪತ್ರಿಕೆಗಳಲ್ಲಿ, ಸಮೀಕ್ಷೆಗಳು, ವರದಿಗಳ ಮೂಲಕ ಹಾಗೂ ಅವರ ಸಿದ್ಧ ಮಾದರಿಗಳನ್ನು ದೂರದರ್ಶನ ಮತ್ತು ಚಲನಚಿತ್ರದಲ್ಲಿ ಪ್ರತಿಬಿಂಬಿಸಿ ತಮ್ಮನ್ನು ಹೀಗಳೆಯುವ ಅಥವಾ ಟೀಕಿಸುವ ವಿಮರ್ಶಕರು

ಹಾಗೂ ಹೊರಗಿನವರ (ಮಿಸ್ಟರ್. ಹೊಲ್ಯಾಂಡ್ಸ್ ಒಪಸ್ ಮತ್ತು ಟು ಸರ್ ವಿತ್ ಲವ್ ಚಿತ್ರಗಳು ಇದಕ್ಕೆ ಅಪವಾದ) ವಿರುದ್ಧ ನಿಲ್ಲುತ್ತಾರೆ ಎನ್ನವುದೂ ಕೂಡ ನಿಮಗೆ ಮನದಟ್ಟಾಗಬಹುದು.

ಇಷ್ಟೆಲ್ಲಾ ಸಮಸ್ಯೆಗಳಿರುವಾಗಲೂ, ನೀವು ಪ್ರತಿ ದಿನವೂ ಏನನ್ನು, ಏಕೆ, ಹೇಗೆ, ಮತ್ತು ಯಾರಿಗೆ ಸಾಮಾಜಿಕ ಅಧ್ಯಯನಗಳನ್ನು ಬೋಧಿಸಬೇಕೆಂದು ನಿರ್ಧರಿಸಲೇಬೇಕು. ನೀವು ಮಾಡುವ ಪ್ರತಿಯೊಂದು ಆಯ್ಕೆಯೂ, ನಿಮ್ಮ ಪ್ರತಿಯೊಂದು ಕ್ರಿಯೆಯೂ, ಪ್ರಜ್ಞಾಪೂರ್ವಕವಿರಲಿ ಅಥವಾ ಅಲ್ಲದಿರಲಿ, ಹಲವಾರು ವರ್ಷಗಳ ಪೂರ್ವ ನಿದರ್ಶನಗಳಿಂದ, ಪರಂಪರೆಗಳಿಂದ, ಮತ್ತು ಪಾಠ್ಯಕ್ರಮದ ಅಗತ್ಯಗಳಿಂದ ಮೂಡಿ ಬಂದಿರುತ್ತದೆ. ಆ ಪ್ರತಿಯೊಂದು ಪರಂಪರೆ ಮತ್ತು ವಿಷಯವಸ್ತುಗಳು ಶೈಕ್ಷಣಿಕ ಸಿದ್ಧಾಂತ ಅಥವಾ ತಾತ್ವಿಕತೆಯನ್ನು ಆಧರಿಸಿರುವ ಮೌಲ್ಯಗಳು ಮತ್ತು ನಂಬಿಕೆಗಳ ಉತ್ಪನ್ನಗಳಾಗಿರುತ್ತವೆ. ಹಾಗಾಗಿ, ಸಿದ್ಧಾಂತವು ಆಚರಣೆಯ ಮೇಲೆ ಪರಿಣಾಮ ಬೀರುತ್ತದೆ ಮತ್ತು ಆಚರಣೆಯು ಸಿದ್ಧಾಂತವನ್ನು ಪ್ರಭಾವಿಸುತ್ತದೆ. ನೀವು ಶಾಲಾಕೊಠಡಿಯ ಬಹಳಷ್ಟು ಸಮಯವನ್ನು ವಾಸ್ತವಿಕ ವಿಷಯಗಳನ್ನು ಒಳಗೊಳ್ಳುವ ನಿಟ್ಟಿನಲ್ಲಿ ವಿನಿಯೋಗಿಸುತ್ತಿದ್ದರೆ, ನಿಮ್ಮ ವರ್ತನೆಗೆ ಪ್ರಸರಣಾ, ಅಥವಾ ನೀತಿಬೋಧಕ ಸಿದ್ಧಾಂತ ಮಾರ್ಗದರ್ಶಿಯಾಗಿರುತ್ತದೆ. ನೀವು ಮೂಲ ಆಕರಗಳಿಗೆ, ಪ್ರಾಥಮಿಕ ದಾಖಲೆ ಮುಂತಾದವುಗಳ ಆಳವಾದ ವಿಶ್ಲೇಷಣೆಗೆ ಒತ್ತು ನೀಡುತ್ತಿದ್ದರೆ ಆಗ ನಿಮ್ಮ ನಿರ್ಧಾರಗಳ ಮೇಲೆ ಚಿಂತನಶೀಲ ಅಥವಾ ಶೋಧನಾ ಸಿದ್ಧಾಂತ ಪ್ರಭಾವ ಬೀರುತ್ತಿರುತ್ತದೆ. ನೀವು ಮೌಲ್ಯಗಳ ಪರೀಕ್ಷಣವನ್ನು ಉತ್ತೇಜಿಸುತ್ತಿದ್ದರೆ, ನೈತಿಕ ಮತ್ತು ಸದಾಚಾರದ ವಿಷಯಗಳ ಚರ್ಚೆಯಲ್ಲಿ ತೊಡಗಿದ್ದರೆ, ಮತ್ತು ವಿದ್ಯಾರ್ಥಿಗಳನ್ನು ಜಾಗತಿಕ ಆಗುಹೋಗುಗಳಲ್ಲಿ ತೊಡಗಿಕೊಳ್ಳುವಂತೆ ಪ್ರೋತ್ಸಾಹಿಸುತ್ತಿದ್ದರೆ, ಆಗ ಭಾವುಕ, ಪೌರತ್ವ, ಅಥವಾ ಸಾಮಾಜಿಕ ಕ್ರಿಯಾಶೀಲ ಸಿದ್ಧಾಂತವು ನಿಮ್ಮ ಬೋಧನೆಯನ್ನು ನಿರ್ದೇಶಿಸುತ್ತಿರುತ್ತದೆ. ಏನೇ ಆದರೂ ಸಿದ್ಧಾಂತ ಮತ್ತು ಆಚರಣೆಗೆ ಸಂಬಂಧವಿದೆ ಮತ್ತು ಇರಲೇಬೇಕು, ಮತ್ತು ನಿಮ್ಮ ಪ್ರಯತ್ನಕ್ಕೆ ಒಂದು ಆದರ್ಶವಿರಲೆಂದು, ಅದನ್ನು ಸಾಧಿಸಲಾಗದಿದ್ದರೂ ಸಹ, ನಾನು ಎಡಬಿಡದೆ ಸಲಹೆಗಳನ್ನು ಮಾರ್ಗದರ್ಶನಗಳನ್ನು ಕೊಡಲು ಮುಂದಾಗುತ್ತೇನೆ. ಸಾಮಾಜಿಕ ಅಧ್ಯಯನಗಳನ್ನು ಬೋಧಿಸುವಲ್ಲಿ ಸಾಕಷ್ಟು ಸಂಕೀರ್ಣತೆಗಳು ಮತ್ತು ಸಮಸ್ಯೆಗಳು ಇದ್ದಾಗ್ಯೂ, ಕೆಳಹಂತದ ಮತ್ತು ಮೇಲಿನ ಹಂತದ ಚಿಂತನೆಗಳ ನಡುವೆ, ಅಥವಾ ನೀತಿಬೋಧಕ, ಚಿಂತನಶೀಲ, ಮತ್ತು ಭಾವುಕ ಗುರಿಗಳ ನಡುವೆ ಒಂದು ಆದರ್ಶಮಯ ಸಮತೋಲನವನ್ನು ಸಾದಿಸಲು ಕಷ್ಟವಾಗಬಹುದು, ಆದರೆ ನಿಮಗೆ ಮಾರ್ಗದರ್ಶನ ಮಾಡಲು ಒಂದು ಆದರ್ಶ, ಸಿದ್ಧಾಂತ, ಮತ್ತು ಸಂಘಟಿತ ಚಿಂತನೆಗಳೇ ಇರದಿದ್ದರೆ ಅದು ಅಸಾಧ್ಯವೆ ಸರಿ.

### ನಾವೀಗ ನಿರ್ಧರಿಸೋಣ

ಕನಿಷ್ಠ ಇಬ್ಬರು ಅಥವಾ ಮೂವರು ಸಹಪಾಠಿಗಳು ಅಥವಾ ಸಹೋದ್ಯೋಗಿಗಳು ಸೇರಿ ಪೌರನೀತಿ ಅಥವಾ ಅರ್ಥಶಾಸ್ತ್ರದ ಪಾಠ್ಯಕ್ರಮದಿಂದ ನೀವು ಆಯ್ದುಕೊಂಡ ವಿಷಯಕ್ಕೆ ಸಂಬಂಧಿಸಿದಂತೆ ಸಿದ್ಧಾಂತ ಹಾಗೂ ಆಚರಣೆಯ ನಡುವಿನ ಕಂದರವನ್ನು ಮುಚ್ಚುವ ಒಂದು ಮಾದರಿ ಗುರಿಯ ಬಗ್ಗೆ ಬರೆಯಿರಿ.

### ತಾತ್ಪರ್ಯ

ಪರಸ್ಪರ ಪ್ರತಿಸ್ಪರ್ಧಿ ಚಿಂತನಾಕ್ರಮಗಳು ಇಡೀ ಕ್ಷೇತ್ರಕ್ಕೆ ವಿವಿಧ ಗುರಿಗಳನ್ನು ಕಾರ್ಯರೂಪಕ್ಕೆ ತರಲು ಬಯಸುತ್ತಿರುವುದರಿಂದ ಸಾಮಾಜಿಕ ಅಧ್ಯಯನಗಳಲ್ಲಿ ಆತಂಕಕ್ಕೆ ಎಡೆಮಾಡಿಕೊಟ್ಟಿದೆ. ನೀತಿಬೋಧಕ ಗುರಿಗಳಿಗೆ

ಒತ್ತು ನೀಡುವವರು ವಿದ್ಯಾರ್ಥಿಗಳು ತಮ್ಮ ಪರಂಪರೆಗಳು, ಸಂಸ್ಕೃತಿ, ಮತ್ತು ಜಗತ್ತಿನ ಬಗ್ಗೆ ಹೆಚ್ಚು ಜ್ಞಾನ ನೀಡುವ ಕಲಿಕೆಯಲ್ಲಿ ತೊಡಗಬೇಕೆಂದು ಬಯಸುತ್ತಾರೆ. ಪ್ರಸರಣಗೊಂಡ ಜ್ಞಾನ ವಿದ್ಯಾರ್ಥಿಗಳಿಗೆ ಎಷ್ಟು ಸಾಧ್ಯವೊ ಅಷ್ಟು ನಿಖರ, ನಂಬಿಕಾರ್ಹ, ಮತ್ತು ಅರ್ಥಪೂಣವಾಗಿರಬೇಕೆಂದು ಅವರು ಆಶಿಸುತ್ತಾರೆ. ಸಾರಭೂತವಾದಿಗಳು ಅರ್ಥಮಾಡಿಕೊಳ್ಳುವಿಕೆ ಮತ್ತು ಮೌಲ್ಯಯುತವಾದುದು ಯಾವುದು ಎನ್ನುವ ವಿವೇಚನೆಗೆ ಒತ್ತು ನೀಡುತ್ತಾರೆ, ಅತ್ಯಂತ ಕಡಿಮೆ ಮಾಹಿತಿಗಿಂತಲೂ ಅತ್ಯಂತ ಹೆಚ್ಚು ಮಾಹಿತಿಯಿರುವ ಈ ಜಗತ್ತನ್ನು ನಿಭಾಯಿಸುವ ನಿಟ್ಟಿನಲ್ಲಿ ಸಮಸ್ಯೆಗಳನ್ನು ಎದುರಿಸತಕ್ಕ ವಿದ್ಯಾರ್ಥಿಗಳು ನಡೆದಾಡುವ ವಿಶ್ವಕೋಶಕ್ಕಿಂತಲೂ ಮಿಗಿಲಾಗಿರಬೇಕೆಂಬುದು ಅವರ ಆಶಯ. ಚಿಂತನಶೀಲ ಆಲೋಚನೆಯ ಗುರಿಗಳಿಗಾಗಿ ಕೆಲಸ ಮಾಡುವವರು ವಿದ್ಯಾರ್ಥಿಗಳು ದತ್ತಾಂಶಗಳನ್ನು ತಲುಪಲು ವ್ಯವಸ್ಥಿತ ಮತ್ತು ವೈಜ್ಞಾನಿಕ ರೀತಿಯನ್ನು, ಸಮಸ್ಯೆಗಳನ್ನು ಬಗೆಹರಿಸುವ ಶೈಲಿಯನ್ನು, ಮತ್ತು ಒಟ್ಟಾರೆಯಾಗಿ ಚಿಕಿತ್ಸಕ ಬುದ್ಧಿಯನ್ನು ಬೆಳೆಸಿಕೊಳ್ಳಬೇಕೆಂದು ಬಯಸುತ್ತಾರೆ. ಸಾಮಾಜಿಕ ವಿಜ್ಞಾನಿಗಳು ಒಂದು ಪೂರ್ವನಿಶ್ಚಿತ "ವೈಜ್ಞಾನಿಕ ಪ್ರಕ್ರಿಯೆ"ಯನ್ನು ಯಾಂತ್ರಿಕವಾಗಿ ಅನುಸರಿಸುವುದಕ್ಕೆ ಬದಲಾಗಿ ಕೌಶಲಪೂರ್ಣ ವಿಶ್ಲೇಷಣೆಯನ್ನು ಬಯಸುತ್ತಾರೆ. ಅಂತಿಮವಾಗಿ, ಭಾವುಕ ಗುರಿಗಳನ್ನು ಬಲವಾಗಿ ಸಮರ್ಥಿಸುವವರು ವಿದ್ಯಾರ್ಥಿಗಳು ಸಂವೇದನಶೀಲ ನೈತಿಕತೆ ಮತ್ತು ತಮ್ಮದೇ ಆದ ಮತ್ತು ಇತರರ ಮೌಲ್ಯಗಳನ್ನು ಮುಕ್ತ ಮನಸ್ಸಿನಿಂದ ಪರೀಕ್ಷೆಗೊಡ್ಡುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಬಯಸುತ್ತಾರೆ. ಸಾಮಾಜಿಕ ಕಾರ್ಯಕರ್ತರು ವಿದ್ಯಾರ್ಥಿಗಳು ಕೇವಲ ವಿಧೇಯತೆಯಿಂದ ಶಾಲಾಕೊಠಡಿಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಯುವಜನಾಂಗದ ಬದಲಿಗೆ, ಉದ್ದೇಶಪೂರ್ವಕ ರಾಜಕೀಯ ಅಥವಾ ಸಾಮಾಜಿಕ ಕ್ರಿಯೆಗೆ ಎಡೆಗೊಡುವ ನಿರ್ಧಾರವನ್ನು ಕೈಗೊಳ್ಳುವ ವಿದ್ಯಾರ್ಥಿಗಳನ್ನು ನಿರೀಕ್ಷಿಸುತ್ತಾರೆ. ಗುರಿಗಳನ್ನು, ಆದ್ಯತೆಗಳನ್ನು ಹೇಗೆ ಸರಿದೂಗಿಸಬಹುದು ಎಂಬುದನ್ನು ಬೋಧಕರಾದ ನೀವು ತೀರ್ಮಾನಿಸಬೇಕು.

ಗೊಂದಲಗಳನ್ನು ಕಡಿಮೆಮಾಡಲು ಮತ್ತು ಶೈಕ್ಷಣಿಕ ಪ್ರೇರಣೆ ಮತ್ತು ಉದ್ದೇಶಗಳನ್ನು ವರ್ಧಿಸಲು, ಈ ಪುಸ್ತಕವು ನೀತಿಬೋಧಕ, ಚಿಂತನಶೀಲ, ಮತ್ತು ಭಾವುಕ ಪದಗುಚ್ಚದಲ್ಲಿ ಸಾಮಾಜಿಕ ಅಧ್ಯಯನಗಳ ದೃಷ್ಟಕೋನವೊಂದನ್ನು ನೀಡುತ್ತದೆ. ಈ ಯೋಜನೆಯನ್ನು ನಿಮ್ಮ ದಿನನಿತ್ಯದ ಪಾಠಗಳನ್ನು ವ್ಯವಸ್ಥಿತಗೊಳಿಸಲು ಬಳಸಬಹುದು. (ಅ) ಜ್ಞಾನವನ್ನು ಸಂಪಾದಿಸುವುದು (ನೀತಿಬೋಧಕ ಗುರಿಗಳು), (ಆ) ಪರಿಕಲ್ಪನೆಗಳ ವಿಕಸನ ಮತ್ತು ವಿವೇಚನಾ ಕೌಶಲ್ಯಗಳು (ಚಿಂತನಶೀಲ ಗುರಿಗಳು), ಮತ್ತು (ಇ) ನೈತಿಕ ನಿರ್ಧಾರಗಳನ್ನು ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ (ಭಾವುಕ ಗುರಿಗಳು) ಇವುಗಳಿಗೆ ಸಂಬಂಧಿಸಿದಂತೆ ನೀವು ಯಾವುದು ಆಗಬೇಕು ಎಂದು ಬಯಸಿದ್ದೀರೊ ಅದನ್ನು ಮತ್ತು ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ನೀವು ಮೌಲ್ಯಮಾಪನ ಮಾಡಬಹುದು.

ಶಾಲಾಕೊಠಡಿಯ ಅಭ್ಯಾಸಗಳನ್ನು ಈ ಪುಸ್ತಕದುದ್ದಕ್ಕೂ ಮೂರು ಸಾಮಾನ್ಯ ಆಯಾಮಗಳಲ್ಲಿ ವಿಭಜಿಸಿ ನೋಡಲಾಗಿದೆ: ದತ್ತಾಂಶ ಸಂಪಾದನೆ ಮತ್ತು ಜ್ಞಾನ ಪ್ರಸರಣವನ್ನು ಮುಖ್ಯ ಗುರಿಗಳಾಗಿ ಹೊಂದಿರುವ, ಮಾಹಿತಿ ಪರಿಷ್ಕರಣಾ ಒಲವು ಪ್ರಧಾನವಾಗಿರುವ ಪಾಠಗಳನ್ನು ಮತ್ತು ಪಠ್ಯಕ್ರಮವನ್ನು ಒಳಗೊಂಡಿರುವ ನೀತಿಬೋಧಕ ಆಯಾಮ; ಊಹಾಸಿದ್ಧಾಂತದ ಸೃಜನೆ ಮತ್ತು ಪರೀಕ್ಷಣದೊಂದಿಗೆ ವಿವೇಚನಾ ಕೌಶಲವನ್ನು ಉತ್ತೇಜಿಸುವ, ಪ್ರಧಾನವಾಗಿ ಸಮಸ್ಯೆಯನ್ನು ಗುರುತಿಸುವ ಮತ್ತು ಸಮಸ್ಯೆಯನ್ನು ಬಗೆಹರಿಸುವ ಒಲವನ್ನು ಹೊಂದಿರುವ ಪಾಠಗಳು ಮತ್ತು ಪಠ್ಯಕ್ರಮಗಳನ್ನು ಒಳಗೊಂಡಿರುವ ಚಿಂತನಶೀಲ ಆಯಾಮ; ಮತ್ತು ಮೌಲ್ಯಗಳನ್ನು

ಪರೀಕ್ಷೆಗೊಳಪಡಿಸುವ ಮತ್ತು ನಂಬಿಕೆಗಳನ್ನು ಮತ್ತು ನಂಬಿಕೆಗಳನ್ನು ಹುಟ್ಟುಹಾಕುವ ವ್ಯವಸ್ಥೆಯನ್ನು ಪರೀಕ್ಷಿಸುವುದನ್ನು ಪ್ರೋತ್ಸಾಹಿಸುವ, ಮತ್ತು ಪ್ರಧಾನವಾಗಿ ನೈತಿಕತೆ ಮತ್ತು ನೀತಿಯನ್ನು ರೂಪಿಸುವ ನಿಟ್ಟಿನ ಒಲವನ್ನು ಹೊಂದಿರುವ ಭಾವುಕ ಆಯಾಮ. ಸಾಮಾಜಿಕ ಅಧ್ಯಯನಗಳನ್ನು, ಸೈದ್ಧಾಂತಿಕವಾಗಿ ಮತ್ತು ಶಾಲಾಕೊಠಡಿಯಲ್ಲಿ ಕಲಿಸುವ ಮತ್ತು ಅನುಭವಕ್ಕೊಳಪಡುವ ರೀತಿಯಲ್ಲಿ ಅರ್ಥೈಸಿಕೊಳ್ಳುವ ಸಮಗ್ರ ರೀತಿಯ ಸಂಬಂಧಿತ, ಅತಿವ್ಯಾಪಿ, ಅಂತಃಕ್ರಿಯಾತ್ಮಕ ಭಾಗಗಳಾಗಿ ಈ ಮೂರೂ ಆಯಾಮಗಳನ್ನು ನೋಡಬೇಕಾಗುತ್ತದೆ. ಪ್ರತಿಯೊಂದು ಆಯಾಮವನ್ನು ಗುರಿಗಳು, ಪಾಠ ಯೋಜನೆಗಳು, ಪ್ರಶ್ನೆಗಳು, ಪಾಠ್ಯ ಕಥಾನಕಗಳು, ಸಮೂಹ ಯೋಜನೆಗಳು, ವ್ಯಾಖ್ಯಾನಗಳು ಮತ್ತು ಪರೀಕ್ಷಣಗಳ ಸೃಜನೆಯಲ್ಲಿ ಬಳಸಬಹುದು. ಸಮಗ್ರವಾಗಿ ಗ್ರಹಿಸಿದಾಗ, ಈ ಮೂರು ಭಾಗದ ಪರಿಕಲ್ಪನೆಯು ನಿರ್ದಿಷ್ಟ ವಿದ್ಯಾರ್ಥಿ ಶ್ರೋತೃವಿಗೆ ಸಂಬಂಧಿಸಿದಂತೆ ನಿಮ್ಮ ಯೋಜನೆಯನ್ನು ಮಾರ್ಗದರ್ಶಿಸಬಹುದಲ್ಲದೆ, ಪಾಠ್ಯಕ್ರಮದ ಆಯ್ಕೆಗಳು ಮತ್ತು ವಿದ್ಯಾರ್ಥಿಯ ಉತ್ಪಾದಕತೆಯ ಮೌಲ್ಯವನ್ನು ನಿರ್ಧರಿಸಬಹುದು.

ನಮ್ಮ ಮೂರು ವರ್ಗೀಕರಣಗಳು ಬಾರ್, ಬಾರ್ತ್, ಮತ್ತು ಶ್ರೆಮಿಸ್ ನಮ್ಮ ಮುಂದಿಟ್ಟ ಸಾಮಾಜಿಕ ಅಧ್ಯಯನಗಳ ತ್ರಿವಿಧ ಪರಿಕಲ್ಪನೆಗಳಿಗೆ ಹೆಚ್ಚು ಕಡಿಮೆ ಹೋಲುತ್ತವೆ. ಈ ಮೂರು ಆಯಾಮಗಳು ನಮ್ಮ ಕ್ಷೇತ್ರದ ಬೋಧನಾ ವಿಧಾನಗಳನ್ನು ಒಂದು ಸ್ತರದವರೆಗೆ ಪ್ರಭಾವಿಸಿರುವ ಎಲ್ಲ ವಿಧದ ತಾತ್ವಿಕ ಅಭಿಪ್ರಾಯಗಳನ್ನು ಒಳಗೊಳ್ಳುವಷ್ಟು ಸಹ ನಮ್ಯವಾಗಿವೆ. ಪ್ರತಿಯೊಂದು ಆಯಾಮವೂ ನಿರ್ದಿಷ್ಟ ಸಾಮಗ್ರಿಗಳು ಮತ್ತು ಸಾಮಾನ್ಯ ಶೈಲಿಯ ಆಯ್ಕೆಗಳ ಮಾರ್ಗದರ್ಶಿಯಾಗಿ, ಪಾಠದ ಯೋಜನೆಯನ್ನು, ಮತ್ತು ಶಾಲಾಕೊಠಡಿಯಲ್ಲಿನ ಸಾಧನೆಯನ್ನು ಪ್ರತಿಬಿಂಬಿಸುತ್ತವೆ ಮತ್ತು ನಿರ್ದೇಶಿಸುತ್ತವೆ. ಸಾಮಾಜಿಕ ಅಧ್ಯಯನಗಳ ಸಂಕೀರ್ಣತೆಗಳು, ಮತ್ತು ಪ್ರತಿಸ್ಪರ್ಧಿ ಆಸಕ್ತಿಗಳು, ಮತ್ತು ನಮ್ಮ ವಿದ್ಯಾರ್ಥಿಗಳ ಅಗತ್ಯಗಳ ನಿಟ್ಟಿನ, ವಾಸ್ತವ ಪರಿಸ್ಥಿತಿಯಲ್ಲಿ ಬಹಳಷ್ಟು ಪಾಠಗಳು ಈಗಾಗಲೆ ಪ್ರತಿಯೊಂದು ಆಯಾಮದ ಅಂಶಗಳನ್ನು ಒಳಗೊಂಡಿವೆ. ಆದರೆ, ಸರ್ವೇಸಾಮಾನ್ಯವಾಗಿ ಒಂದು ಪಾಠವು ನೀತಿಬೋಧಕ, ಚಿಂತನಶೀಲ, ಅಥವಾ ಭಾವುಕ ಉದ್ದೇಶಕ್ಕೆ ಒತ್ತು ನೀಡುವ ಪ್ರಬಲ ಗುರಿಯಿಂದ ನಿರ್ದೇಶಿಸಲ್ಪಟ್ಟಿರುತ್ತದೆ. ಚರ್ಚೆ, ಉಪನ್ಯಾಸ, ಪಾತ್ರ-ನಿರ್ವಹಣೆ, ಪ್ರತ್ಯನುಕರಣೆ, ಅಥವಾ ಸಂಶೋಧನಾ ಪ್ರಸ್ತಾವನೆ, ಯಾವುದೇ ಇರಲಿ ಪಾಠವೊಂದರ ಮಾರ್ಗವನ್ನು ನಿರ್ದೇಶಿಸುವಲ್ಲಿ ಒಂದು ಗುರಿಯು ಪ್ರಧಾನ ಪಾತ್ರ ವಹಿಸುತ್ತದೆ ಮತ್ತು ಇತರ ಗುರಿಗಳ ಮಹತ್ವವನ್ನು ಕಡಿಮೆ ಮಾಡುವ ಪ್ರವೃತ್ತಿಯನ್ನು ಹೊಂದಿರುತ್ತದೆ. ಅಗತ್ಯಕ್ಕಿಂತಲೂ ಹೆಚ್ಚನ್ನು ಮಾಡಲು ಪ್ರಯತ್ನಿಸುವ ಅಥವಾ ಸಂಘರ್ಷಯುತ ಗುರಿಗಳನ್ನು ಹೊಂದಿರುವ ಪಾಠವು ದಿಕ್ಕು ತಪ್ಪುತ್ತದೆ ಮತ್ತು ವಿದ್ಯಾರ್ಥಿಗಳಲ್ಲಿ ಗೊಂದಲ ಹುಟ್ಟಿಸುತ್ತದೆ. ಅತ್ಯಂತ ಕಡಿಮೆ ವಿಷಯಗಳತ್ತ ಗಮನಹರಿಸುವ ಪಾಠವು (ಉದಾ: ದತ್ತಾಂಶ ಸಂಗ್ರಹಣೆ) ನೀರಸವಾಗಿರುತ್ತದೆ ಮತ್ತು ನಿರಾಸಕ್ತಿಯನ್ನು ಹುಟ್ಟುಹಾಕುತ್ತದೆ. ಇಲ್ಲಿ ಹೇಳುತ್ತಿರುವುದಿಷ್ಟೆ, ಎಲ್ಲ ಮೂರು ಆಯಾಮಗಳನ್ನು ಪರಸ್ಪರ ಪೂರಕವಾಗಿ ಒಟ್ಟಾಗಿ ತಂದು ಪಾಠ ಮಾಡಿದರೆ ಅದು ಅತ್ಯುತ್ತಮವಾಗಿರುತ್ತದೆ.

ಹಾಗಾಗಿ, ಪ್ರತಿಯೊಂದು ಆಯಾಮವನ್ನು ಯೋಜನೆ, ವಿಷಯವಸ್ತುವಿನ ಆಯ್ಕೆ, ವಿದ್ಯಾರ್ಥಿಗಳ ಕಲಿಕೆ ಮತ್ತು ಪ್ರತಿಕ್ರಿಯೆಗಳ ಮೌಲ್ಯಮಾಪನಕ್ಕೆ ಸಂಬಂಧಿಸಿದ ಸಂಘಟಿತ ವಿಚಾರವೆಂದು ಗ್ರಹಿಸಬಹುದಾಗಿದೆ. ಉದಾಹರಣೆಗೆ, ವಿದ್ಯಾರ್ಥಿಗಳು ಮೆಕ್ಸಿಕನ್ ಸ್ವಾತಂತ್ರ್ಯದ ಘಟನೆಗಳನ್ನು ಪುನರಾವಲೋಕಿಸುವ ಪಾಠವನ್ನು ನಿಸ್ಸಂಶಯವಾಗಿ ನೀತಿಬೋಧಕ ಆಯಾಮದಲ್ಲಿಡಬಹುದು. ವಿದ್ಯಾರ್ಥಿಗಳು ಸರಕಾರವನ್ನು ಕುರಿತ ಮೆಕೆವಲ್ಲಿಯ ಚಿಂತನೆಯನ್ನು

ವಿಶ್ಲೇಷಣೆ ಮಾಡಿ ಅದನ್ನು ಅರಿಸ್ಟಾಟಲನ ಚಿಂತನೆಯ ಜೊತೆ ಹೋಲಿಕೆ ಮಾಡುತ್ತಿರುವ ಕಾರ್ಯಚಟುವಟಿಕೆಯನ್ನು ನಿಸ್ಸಂದೇಹವಾಗಿ ಚಿಂತನಶೀಲ ಆಯಾಮದಲ್ಲಿಡಬಹುದು. ಯಾವ ಸರಕಾರದ ಪರಿಸರದ ನೀತಿ ಮತ್ತು ಕ್ರಿಯೆಯು ಸಮಾಜಕ್ಕೆ ಅತ್ಯಂತ ಸೂಕ್ತವಾಗಿದೆ ಎನ್ನುವುದರ ಚರ್ಚೆಯು, ಬಹಳಷ್ಟು ಮಟ್ಟಿಗೆ, ಭಾವಾತ್ಮಕ ಆಯಾಮಕ್ಕೆ ಸೇರುತ್ತದೆ. ಒಂದು ಪಾಠ, ಘಟಕ, ಅಥವಾ ಪಾಠ್ಯಕ್ರಮವು, ಸಂಕೀರ್ಣ ರೀತಿಗಳಲ್ಲಿ ಎರಡು ಅಥವಾ ಮೂರು ಆಯಾಮಗಳನ್ನು ಒಟ್ಟಿಗೆ ತಂದು - ಬಹುಶಃ ಮೂರೂ ವರ್ಗೀಕರಣಗಳ ನಡುವೆ ಒಂದು ಬಗೆಯ ಪರಿಪೂರ್ಣ ಸಮತೋಲನವನ್ನು ಸಾಧಿಸಿಯೂ ಕೂಡ - ತನ್ನ ದಿಕ್ಕು ಮತ್ತು ಲಕ್ಷಣವನ್ನು ಬದಲಾಯಿಸಬಹುದು ಎನ್ನುವುದನ್ನು ಗ್ರಹಿಕೆಗೆ ತಂದುಕೊಳ್ಳುವುದನ್ನು ಅಲ್ಲಗಳೆಯಲಾಗುವುದಿಲ್ಲ. ಅತ್ಯುತ್ತಮ ಸಾಮಾಜಿಕ ಅಧ್ಯಯನದ ಪಾಠಗಳು, ನಾವು ವಿಕಸಿತಗೊಳಿಸಬಯಸುವ ಕಲಿಕೆಯ ವಿಧ ಮತ್ತು ಮಾನವನ ಸ್ವರೂಪದ ಕಾಳಜಿಯನ್ನು ಹೊಂದಿರುವ ವ್ಯಾಪಕ ಗುರಿಯನ್ನು ಸಾಧಿಸಲು ನೀತಿಬೋಧಕ, ಚಿಂತನಶೀಲ, ಮತ್ತು ಭಾವುಕ ಉದ್ದೇಶಗಳನ್ನು ಒಟ್ಟುಗೂಡಿಸುತ್ತದೆ.

ಮಾಡಬೇಕಾದ್ದು

ಸಾಧ್ಯವಾದರೆ ಒಂದೇ ವಿಷಯವನ್ನೊಳಗೊಂಡ ಹಲವು ಸಾಮಾಜಿಕ ಅಧ್ಯಯನಗಳನ್ನು ಅವಲೋಕಿಸಿ. ಪ್ರಧಾನ ಚಟುವಟಿಕಗಳು , ಪ್ರಶ್ನೆಗಳು , ಮತ್ತು ನೀವು ಗಮನಿಸುವ ಉತ್ತರಗಳನ್ನು ಟಿಪ್ಪಣಿ ಮಾಡಿ. ಶೋಧನೆಗಳು ಮತ್ತು ಪ್ರತಿಕ್ರಿಯೆಗಳನ್ನು ನೀತಿಬೋಧಕ, ಚಿಂತನಶೀಲ, ಅಥವಾ ಭಾವುಕವೆಂದು ವರ್ಗೀಕರಿಸುವುದು ಸಾಧ್ಯವೆ? ಈ ವ್ಯತ್ಯಾಸಗಳನ್ನು ನಿರ್ಧರಿಸುವುದು ಕಠಿಣವೆ ಅಥವಾ ಸುಲಭವೆ? ವ್ಯತ್ಯಾಸಗಳನ್ನು ನೀವು ಉತ್ತಮಪಡಿಸಬಹುದೆ?

ನಾವು ನಿರ್ಧರಿಸೋಣ

ಸಾಮಾಜಿಕ ಅಧ್ಯಯನಗಳ ಬೋಧನೆಯಲ್ಲಿ ಸಿದ್ಧಾಂತ ಮತ್ತು ಆಚರಣೆ ಎನ್ನುವ ವಿಷಯದ ಕುರಿತು ಹಲವು ಸಹೋದ್ಯೋಗಿಗಳನ್ನು ಮತ್ತು ಸಹಪಾಠಿಗಳನ್ನು ಸಮೀಕ್ಷೆ ಮಾಡಿ. ಮಾಧ್ಯಮಿಕ ಹಂತದಲ್ಲಿ ಯುವಜನಾಂಗವು 3 ಅಥವಾ 4 ವರ್ಷಗಳ ಕಾಲ ಸಾಮಾಜಿಕ ಅಧ್ಯಯನಗಳನ್ನು ಪೂರೈಸಬೇಕಾದ ಅಗತ್ಯಕ್ಕೆ ಕಾರಣಗಳೇನು ಎನ್ನುವುದರ ಬಗ್ಗೆ ಬೋಧಕರು ಮತ್ತು ವಿದ್ಯಾರ್ಥಿಗಳನ್ನು ಕೇಳಿ. ಅವಶ್ಯಕತೆಗಳಿಗೆ ಅವರು ತರ್ಕವನ್ನು ಪ್ರಸ್ತುತಪಡಿಸುತ್ತಾರೆಯೇ? ಅವರದೇ ಆದ ಬೋಧನಾ ವಿಧಾನಗಳನ್ನು ಅವರು ಹೇಗೆ ವಿವರಿಸುತ್ತಾರೆ ಮತ್ತು ಸಮರ್ಥನೆ ಮಾಡಿಕೊಳ್ಳುತ್ತಾರೆ? ಮುಖ್ಯವಾಗಿ, ನಿರ್ದಿಷ್ಟ ಉದ್ದೇಶವೊಂದಕ್ಕಾಗಿ ವಾದಿಸುತ್ತಾರೆಯೆ? ಅಥವಾ ಮೇಲಿನ ಎಲ್ಲವೂ ಹೌದೆ, ಅಥವಾ ಯಾವದೂ ಅಲ್ಲವೆ? ಒಬ್ಬ ಬೋಧಕ ಒಂದು ನಿಲುವನ್ನು ಅಥವಾ ವಿಷಯಗಳು, ಪ್ರಶ್ನೆಗಳು, ಮತ್ತು ಪರೀಕ್ಷೆಗಳನ್ನು ಕುರಿತ ಆತನ/ಆಕೆಯ ಆಯ್ಕೆಗೆ ಸರಿಹೊಂದುವಂತಹ ನಿಲುವನ್ನು ಹೊಂದಿದ್ದಾನೆ/ಳೆಯೇ ಅಥವಾ ಆ ಆಯ್ಕೆಗೆ ಸರಿಹೊಂದುವಂತಹ ತತ್ವವನ್ನು ಆರಿಸಿದ್ದಾನೆ/ಳೆಯೇ ಮತ್ತು ಯಾವಾಗ ಎಂಬುದನ್ನು ನೀವು ಹೇಗೆ ಹೇಳುತ್ತೀರಿ? "ಕೇವಲ ವಿಭಾಗದ ಯೋಜನೆಗಳು ಅಥವಾ ಜಿಲ್ಲಾ ಮಾರ್ಗದರ್ಶಿ ಸೂಚಿಗಳ" ಪ್ರಕಾರ ಸಾಗುವ ವ್ಯಕ್ತಿಯನ್ನು ನೀವು ಹೇಗೆ ಮೌಲ್ಯಮಾಪನ ಮಾಡುತ್ತೀರಿ? ಸಾಮಾಜಿಕ ಅಧ್ಯಯನಗಳ ಗುಣಾತ್ಮಕ ಬೋಧನೆಗೆ ಮಾರ್ಗಸೂಚಿಗಳು ಸಾಕಾಗುತ್ತವೆಯೆ? ತಾತ್ವಿಕತೆ ಮತ್ತು ಗುರಿಗಳ ಅಗತ್ಯ ನಮಗಿದೆಯೆ? ಏಕೆ ಅಥವಾ ಏಕಿಲ್ಲ?